ದೆಹಲಿ ಕರ್ನಾಟಕ ಸಂಘದ

# ಅಭಿಮತ

ಏಪ್ರಿಲ್-2018
ಬೆಲೆ ರೂ. 1



## ರಾಷ್ಟ್ರೀಯ ಅಬ್ಬಕ್ಕ ಉತ್ಸವ ಇಂಡಿಯಾಗೇಟಿನಲ್ಲಿ

# ಅಬ್ಬಕ್ಕನಿಗೆ ನಮನ

ಸಂಪುಟ 28 ಸಂಚಿಕೆ 7
ಏಪ್ರಿಲ್ 2018, ಬೆಲೆ ರೂ. 1

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

## ನೇರ ಮಾತು

ಗೂಗಲ್ ಸಂಸ್ಥೆ ಕಮಲಾದೇವಿ ಚಟ್ಟೋಪಾಧ್ಯಾಯರಿಗೆ ಅವರ ನೂರ ಹದಿನೈದನೇಯ ಜನ್ಮದಿನದ ಸಂದರ್ಭ ವಿಶೇಷ ಗೌರವ ಸಲ್ಲಿಸಿದೆ. ಇದು ಭಾರತದ ನಮಗೆ ಹೆಮ್ಮೆಯ ಸಂಗತಿ. ಜೊತೆಗೆ ಇವರು ಕರ್ನಾಟಕದವರು ಎನ್ನುವುದೂ ಕೂಡ ಅತ್ಯಂತ ಅಭಿಮಾನದ ಸಂಗತಿ.

ಎರಡನೆಯ ಜಾಗತಿಕ ಯುದ್ಧದ ಸಂದರ್ಭ ಕಮಲಾದೇವಿ ಜಗತ್ತನ್ನೆಲ್ಲ ಸುತ್ತು ಹಾಕಿ ಭಾರತದ ಸ್ವಾತಂತ್ರ್ಯಕ್ಕಾಗಿ ಜಾಗತಿಕ ಸದಭಿಪ್ರಾಯ ಮೂಡಿಸಲು ಪ್ರಯತ್ನಪಟ್ಟರು. ಸ್ವಾತಂತ್ರ್ಯದ ನಂತರ ದೇಶವಿಭಜನೆಯಾದ ಸಂದರ್ಭ 'ಕಮಲಾದೇವಿ', 'ಭಾರತೀಯ ಸಹಕಾರಿ ಒಕ್ಕೂಟ' ಸ್ಥಾಪಿಸಿ ನಿರಾಶ್ರಿತರ ಪುನರ್ವಸತಿಗೆ ಪ್ರಯತ್ನಿಸಿದರು. ಇದರ ಅಂಗವಾಗಿ ದಿಲ್ಲಿಯ ಹೊರವಲಯದಲ್ಲಿ ಕಮಲಾದೇವಿಯವರು ಸುಶೀಲಾ ನಯ್ಯರ್ ಜೊತೆಗೂಡಿ 'ಫರೀದಾಬಾದ' ಎನ್ನುವ ಗ್ರಾಮವನ್ನು ಸ್ಥಾಪಿಸಿದರು. ಸುಮಾರು 50000 ನಿರಾಶ್ರಿತರಿಗೆ ವಸತಿ ಕಲ್ಪಿಸಿಕೊಟ್ಟರು.

ಅಂದಿನ ಪ್ರಧಾನಿ ಜವಾಹರಲಾಲ ನೆಹರುರವರ ಯಾಂತ್ರೀಕರಣದ ಒಲವಿನಿಂದಾಗಿ ಕರಕುಶಲ ಕೈಗಾರಿಕೆಗಳಿಗೆ, ವಿಶೇಷತಃ ಅಸಂಘಟಿತ ಹೆಣ್ಣು ಮಕ್ಕಳ ಕೈಗಾರಿಕೆಗಳಿಗೆ ಧಕ್ಕೆ ಬರುವ ಸಂಭಾವ್ಯತೆಯನ್ನು ಕಂಡ ಕಮಲಾದೇವಿಯರು ಅನೇಕ 'ಕರಕುಶಲ' ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸಿದರು. ಅಲ್ಲದೆ ದೆಹಲಿಯ ಥಿಯೇಟರ್ ಕ್ರಾಫ್ಟ್ಸ್ ಮ್ಯೂಸಿಯಂ' ಹಾಗೂ 'ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾ'ವನ್ನು ಸ್ಥಾಪಿಸಿದರು. ಆಲ್ ಇಂಡಿಯಾ ಹ್ಯಾಂಡಿಕ್ರಾಫ್ಟ್ಸ್ ಬೋರ್ಡ್ ಅನ್ನು ಆರಂಭಿಸಿ ಅನೇಕ 'ಕರಕುಶಲ' ಕರ್ಮಿಗಳಿಗೆ ಸನ್ಮಾನ' ಮಾಡಿ ಗೌರವಿಸಿದರು.

ದೆಹಲಿ ಕರ್ನಾಟಕ ಸಂಘ, ದಕ್ಷಿಣ ಕನ್ನಡ ಜಿಲ್ಲಾಡಳಿತ ಸಹಯೋಗದೊಂದಿಗೆ ಎಂಟು ದಿನಗಳ 'ವೀರರಾಣಿ ಅಬ್ಬಕ್ಕ ಉತ್ಸವ'ವನ್ನು ಯಶಸ್ವಿಯಾಗಿ ಮತ್ತು ಅರ್ಥಪೂರ್ಣವಾಗಿ ಆಯೋಜಿಸಿ ಅಬ್ಬಕ್ಕನನ್ನು ದೇಶಕ್ಕೆ ಪರಿಚಯಿಸುವಂತಹ ಮಹತ್ತರವಾದ ಕಾರ್ಯಾರಂಭ ಮಾಡಿದೆ. ದೇಶದ ಪ್ರಪ್ರಥಮ ಮಹಿಳಾ ಹೋರಾಟಗಾರ್ತಿಯಾಗಿರುವ ವೀರರಾಣಿ ಅಬ್ಬಕ್ಕ ನಮ್ಮ ನಾಡಿನವರು ಎನ್ನುವ ಹೆಮ್ಮೆ. ಭಾರತ ಸರಕಾರ ಸ್ವಾತಂತ್ರ್ಯ ಹೋರಾಟಗಾರರನ್ನು ನಿರಂತರವಾಗಿ ಗೌರವಿಸುವ, ಚರಿತ್ರೆಯಲ್ಲಿ ದಾಖಲಿಸುವ ಕೆಲಸಗಳನ್ನು ಪ್ರಾಮಾಣಿಕವಾಗಿ ಮಾಡುತ್ತಾ ಬಂದಿದೆ. ಆದರೂ ಕೂಡಾ ಪ್ರಪ್ರಥಮ ಮಹಿಳಾ ಹೋರಾಟಗಾರ್ತಿಯಾದ ಅಬ್ಬಕ್ಕನಿಗೆ ಭಾರತದ ಚರಿತ್ರೆಯಲ್ಲಿ ಸರಿಯಾದ ಸ್ಥಾನಮಾನ ನೀಡುವಲ್ಲಿ ವಿಫಲವಾಗಿದೆ. ಮಹಿಳೆಯರಿಗೆ ಪ್ರಾಧಾನ್ಯತೆ ನೀಡಬೇಕು ಎನ್ನುವ ಬಲವಾದ ವಿಚಾರವನ್ನು ಮಂಡಿಸುವ ಯಾವುದೇ ಮಹಿಳಾ ಸಂಘಟನೆಗಳು ಕೂಡಾ ಈ ಬಗ್ಗೆ, ಈವರೆಗೆ ಅಬ್ಬಕ್ಕನ ಕುರಿತು ಚಕಾರವೆತ್ತದಿರುವುದು ಅತೀ ಆಶ್ಚರ್ಯ. ದೇಶದ ರಾಜಕಾರಣಿಗಳು ಮುಖ್ಯವಾಗಿ ಕನ್ನಡನಾಡಿನ ರಾಜಕಾರಣಿಗಳು ಈ ಕುರಿತು ಯಾವುದೇ ಪ್ರಯತ್ನ ಮಾಡದಿರುವುದು ವಿಷಾದನೀಯ.

ಸಂಘಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 20 ಲಕ್ಷ ರೂಪಾಯಿ ಮತ್ತು ಅಬ್ಬಕ್ಕ ರಾಷ್ಟ್ರೀಯ ಉತ್ಸವಕ್ಕಾಗಿ ದಕ್ಷಿಣ ಜಿಲ್ಲಾಡಳಿತದಿಂದ 12 ಲಕ್ಷ ರೂಪಾಯಿಗಳ ಅನುದಾನ ಬಂದಿದೆ. ಒಂದು ಆರ್ಥಿಕ ವರ್ಷದಲ್ಲಿ ಅತ್ಯಂತ ಹೆಚ್ಚು 32 ಲಕ್ಷ ರೂಪಾಯಿಗಳ ಅನುದಾನ ಸಂಘಕ್ಕೆ ಬರಲು ವ್ಯವಸ್ಥಿತವಾದ ಕೆಲಸಗಳನ್ನು ಮಾಡಿದ ಮತ್ತು ಮಾಡಲು ಸಹಕರಿಸಿದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಪದಾಧಿಕಾರಿಗಳು ಮತ್ತು ಸಮಿತಿಯ ಸದಸ್ಯರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದಕ್ಷಿಣ ಕನ್ನಡ ಜಿಲ್ಲಾಡಳಿತಕ್ಕೆ ನನ್ನ ಕೃತಜ್ಞತೆಗಳು.

ದೆಹಲಿ ಕರ್ನಾಟಕ ಸಂಘದ ವಿಶೇಷ ಪ್ರಯತ್ನದಿಂದ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠ ಆರಂಭಗೊಂಡ ಹಾಗೆ, ಸಂಘದ ಪಕ್ಕದಲ್ಲಿರುವ ಮೆಟ್ರೋ ನಿಲ್ದಾಣಕ್ಕೆ ಕನ್ನಡದ ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರನ್ನು ಇಡಲು ಪ್ರಯತ್ನಿಸಿದ ಹಾಗೆ, ಈಗ ವೀರರಾಣಿ ಅಬ್ಬಕ್ಕನಿಗೆ ಸಿಗಬೇಕಾದ ಮನ್ನಣೆ ದೊರಕಿಸಲು ಸಂಘ ಕಾರ್ಯಪ್ರವೃತ್ತವಾಗಿದೆ. ನಿಮ್ಮೆಲ್ಲರ ಪ್ರೀತಿಪೂರ್ವಕ ಸಹಕಾರ ನಿರಂತರವಾಗಿ ಇರಲಿ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***



ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011–26109615 / 26104818

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** **MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಏಪ್ರಿಲ್, 2018ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** **B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಏಪ್ರಿಲ್, 2018ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** **MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 29 ಏಪ್ರಿಲ್, 2018ರಂದು ಬೆಳಿಗ್ಗೆ 11 ಗಂಟೆಯಿಂದ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 8447288475
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ


DELHI KARNATAKA *SANGHA* Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

## ಮುನ್ನೋಟ

ರಾಷ್ಟ್ರ ರಾಜಧಾನಿಯಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಮೊತ್ತ ಮೊದಲಿಗೆ ತುಳುನಾಡ ವೀರರಾಣಿ ಅಬ್ಬಕ್ಕ ರಾಷ್ಟ್ರೀಯ ಉತ್ಸವವನ್ನು ಆಯೋಜನೆ ಮಾಡಲಾಗಿದ್ದು ಇದಕ್ಕೆ ಸಹಕಾರವಾಗಿ ನಿಂತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದಕ್ಷಿಣ ಕನ್ನಡ ಜಿಲ್ಲಾಡಳಿತ ಅಬ್ಬಕ್ಕ ಉತ್ಸವ ಸಮಿತಿ, ಜೊತೆಗೂಡಿ ಕಾರ್ಯಕ್ರಮವನ್ನು ದಕ್ಷಿಣ ಭಾರತದಲ್ಲಿರುವ ತುಳು, ಮರಾಠಿ, ತೆಲುಗು, ಮಲೆಯಾಳಂ, ತಮಿಳು, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ವಿಚಾರ ಸಂಕಿರಣಗಳನ್ನು ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮಗಳು ಸತತವಾಗಿ ಒಂದು ವಾರಗಳ ಕಾಲ ನಡೆಯಿತು. ಈ ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲಾ ಅಧಿಕಾರಿಗಳಿಗೆ ಧನ್ಯವಾದಗಳು.

ಮಾರ್ಚ್ 25ರಂದು ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಗುರುಗ್ರಾಮ ಕನ್ನಡ ಸಂಘದ ಯುಗಾದಿ ಸಾಂಸ್ಕೃತಿಕ ಮಿಲನವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸ್ಥಳೀಯವಾಗಿ ಕಲಾವಿದರು ಮಾಡಿದ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಚಾಮರಾಜ ಫಿಲ್ಮ್ ಇನ್ಸಿಟ್ಯೂಟ್, ಬೆಂಗಳೂರು ತಂಡದಿಂದ ಅದ್ಭುತವಾದ ನೃತ್ಯ ಕಾರ್ಯಕ್ರಮ ಮೂಡಿ ಬಂತು. ಇದೇ ಸಂದರ್ಭದಲ್ಲಿ ಗುರುಗ್ರಾಮ ಕನ್ನಡ ಸಂಘಕ್ಕೆ ಸೇವೆ ಸಲ್ಲಿಸಿದ ಎಲ್ಲಾ ಮಹನೀಯರುಗಳನ್ನು ಅಭಿನಂದಿಸಲಾಯಿತು.

ಏಪ್ರಿಲ್ 1ರಂದು ಎಂ.ಎಸ್. ಸತ್ಯು ನಿರ್ದೇಶನದ 'ಗುಲ್ ಏ ಬಕಾವಲಿ' ನಾಟಕ ಪ್ರದರ್ಶನವಾಯಿತು. ಇದೇ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದಂತಹ ಡಾ. ದೊಡ್ಡರಂಗೇ ಗೌಡರನ್ನು ಸಂಘದ ಪರವಾಗಿ ಅಭಿನಂದಿಸಿ ಸನ್ಮಾನಿಸಲಾಯಿತು.

ಏಪ್ರಿಲ್ 14ರಂದು ಸಂಘದ ಸಹಯೋಗದಲ್ಲಿ ಅಂಬೇಡ್ಕರ್ ಸಾಂಸ್ಕೃತಿಕ ಉತ್ಸವವನ್ನು ದೆಹಲಿಯ ಸ್ಥಳೀಯ 'ಸ್ಫೂರ್ತಿ ಫೌಂಡೇಶನ್' ಆಯೋಜನೆ ಮಾಡಿದೆ. 22ರಂದು ಬಸವಣ್ಣ ಮತ್ತು ಅಕ್ಕಮಹಾದೇವಿ ಸ್ಮರಣೆ, ಬಸವ ಇಂಟರ್‌ನ್ಯಾಷನಲ್ ಫೌಂಡೇಶನ್, ಲಂಡನ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು ಸಹಯೋಗದೊಂದಿಗೆ ನಡೆಯಲಿದೆ. ವರ್ತಮಾನಕ್ಕೆ ಸಲ್ಲುವ ವಚನ ಸಂಸ್ಕೃತಿ–ರಾಷ್ಟ್ರೀಯ ವಿಚಾರ ಸಂಕಿರಣ, ವಚನ ಸಂಗೀತ, ವಚನ ದೃಶ್ಯ ರೂಪಕ ಕಾರ್ಯಕ್ರಮಗಳು ಜರುಗಲಿದೆ. ತಾವೆಲ್ಲರೂ ಬಂದು ಭಾಗವಹಿಸಿ.

ದೆಹಲಿಯಲ್ಲಿರುವ ಕನ್ನಡಿಗರು ಹೊಸ ಸಂವಿಧಾನದ ಪ್ರಕಾರವಾಗಿ ಸದಸ್ಯತ್ವವನ್ನು ಪಡೆಯಬಹುದು. ಅವರಿಗೆ ಸ್ವಾಗತವನ್ನು ಕೋರುತ್ತಿದೆ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**2018 ಏಪ್ರಿಲ್ 14**
ಶನಿವಾರ
ಬೆಳಿಗ್ಗೆ : 11.00 ಗಂಟೆಗೆ

**ಅಂಬೇಡ್ಕರ್ ಸಾಂಸ್ಕೃತಿಕ ಉತ್ಸವ**
ಸಹಯೋಗ : ಅಂಬೇಡ್ಕರ್ ಸ್ಫೂರ್ತಿ ಫೌಂಡೇಶನ್, ನವದೆಹಲಿ
ಡಾ. ಕೆ.ಪಿ. ಪುತ್ತುರಾಯ ಅವರಿಂದ ಹಾಸ್ಯ ಸಂಜೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು

**2018 ಏಪ್ರಿಲ್ 15**
ಭಾನುವಾರ
ಅಪರಾಹ್ನ : 3.00 ಗಂಟೆಗೆ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕರ್ನಾಟಕ ವಾರ್ತಾ ಕೇಂದ್ರ ಮತ್ತು ದೆಹಲಿ ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ ಜೀರ್‌ಜಿಂಬೆ ರಾಜ್ಯಪ್ರಶಸ್ತಿ ಪುರಸ್ಕೃತ ಮಕ್ಕಳ ಚಿತ್ರ ಚಲನಚಿತ್ರ ಪ್ರದರ್ಶನ

**2018 ಏಪ್ರಿಲ್ 22**
ಭಾನುವಾರ
ಬೆಳಿಗ್ಗೆ : 10.30 ಗಂಟೆಗೆ

**ಬಸವಣ್ಣ ಮತ್ತು ಅಕ್ಕಮಹಾದೇವಿ ಸ್ಮರಣೆ**
ಸಹಯೋಗ : ಬಸವ ಇಂಟರ್‌ನ್ಯಾಷನಲ್ ಫೌಂಡೇಶನ್, ಲಂಡನ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು
ವರ್ತಮಾನಕ್ಕೆ ಸಲ್ಲುವ ವಚನ ಸಂಸ್ಕೃತಿ –ರಾಷ್ಟ್ರೀಯ ವಿಚಾರ ಸಂಕಿರಣ
ವಚನ ಸಂಗೀತ–ಶ್ರೀ ಸಿದ್ದರಾಮ ಕೇಸಾಪುರ, ಬೆಂಗಳೂರು
ವಚನ ದೃಶ್ಯ ರೂಪಕ–ಪ್ರಯೋಗ ರಂಗ ತಂಡದಿಂದ

## ಉಪನ್ಯಾಸ ಮಾಲೆ



**ಡಾ. ಭೀಮ ಭಟ್**
**ಅವರಿಂದ "ಆಯುರ್ವೇದದಿಂದ ಆರೋಗ್ಯ" ಉಪನ್ಯಾಸ ಮಾಲೆ**

ಹೋಲಿ ಫ್ಯಾಮಿಲಿ ಆಸ್ಪತ್ರೆಯ ಹಿರಿಯ ಆಯುರ್ವೇದ ವೈದ್ಯರಾದ **ಡಾ. ಭೀಮ ಭಟ್** ಅವರು ಮೂರು ದಶಕಗಳಿಂದ ಪ್ರತೀ ತಿಂಗಳ ಕೊನೆಯ ಭಾನುವಾರ ದೆಹಲಿ ಕರ್ನಾಟಕ ಸಂಘದಲ್ಲಿ ಉಚಿತ ವೈದ್ಯಕೀಯ ಸಲಹೆಯನ್ನು ನೀಡುತ್ತಾ ಬಂದಿದ್ದಾರೆ.

**ಏಪ್ರಿಲ್ 29ರ ಭಾನುವಾರ ಮಧ್ಯಾಹ್ನ ಗಂಟೆ 2.00 ರಿಂದ 4.00ರವರೆಗೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ವೈಯಕ್ತಿಕ ಶಾರೀರಿಕ ಮತ್ತು ಮಾನಸಿಕ ಪ್ರಕೃತಿಯ ಕುರಿತು ಉಪನ್ಯಾಸ (ಮುಂದುವರಿದ ಭಾಗ) ಹಾಗೂ ಸಂಜೆ ಗಂಟೆ 5.00ರಿಂದ ಉಚಿತ ವೈದ್ಯಕೀಯ ಸಲಹೆಯನ್ನು** ನೀಡಲಿದ್ದಾರೆ. ಸಂಘದ ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

ಅಭಿಮತ ಪ್ರಧಾನ ಸಂಪಾದಕರು

ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ

ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 28 ಸಂಚಿಕೆ 7

ಏಪ್ರಿಲ್ 2018

ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

## ಸಂಪಾದಕರ ಟಿಪ್ಪಣಿಗಳು



# ದೆಹಲಿಯ ಕನ್ನಡ ರಂಗಭೂಮಿ ಮರುಚೇತನ ಪಡೆಯಬೇಕು

ಮಹಾನ್ ರಂಗ ನಿರ್ದೇಶಕ ಥಿಯೋಡೊರಾಸ್ ಟೆರ್ಝೋಪೊಲಸ್ ಅವರ ಮುನ್ನೋಟದಿಂದ ಗ್ರೀಕ್‌ನ ಡೆಲ್ಫಿಯಲ್ಲಿ 1993ರಲ್ಲಿ ಅಸ್ತಿತ್ವಕ್ಕೆ ಬಂದ ಥಿಯೇಟರ್ ಒಲಿಂಪಿಕ್ಸ್ ಜಗತ್ತಿನ ಮಹಾನ್ ರಂಗನಿರ್ದೇಶಕರ ಉತ್ತಮ ಪ್ರಯೋಗಗಳನ್ನು ಪ್ರದರ್ಶಿಸುವ ಜತೆಗೆ ರಂಗಭೂಮಿಯ ಕಲಾವಿದರು, ರಂಗಚಿಂತಕರು ಮತ್ತು ರಂಗಭೂಮಿಯ ಆಸಕ್ತರಿಗೆ ವಿಚಾರ ವಿನಿಮಯ ಮಾಡಿಕೊಳ್ಳುವ ಒಂದು ಪ್ರಮುಖ ಉತ್ಸವವಾಗಿದೆ. ಈ ಸಲದ ಥಿಯೇಟರ್ ಒಲಿಂಪಿಕ್ಸ್ ಭಾರತ ಸರಕಾರದ ಸಂಸ್ಕೃತಿ ಸಚಿವಾಲಯದ ನೇತೃತ್ವದಲ್ಲಿ ನವದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ ಮೂಲಕ ದೇಶದ 17 ನಗರಗಳಲ್ಲಿ ಫೆಬ್ರವರಿ 17ರಿಂದ ಮಾರ್ಚ್ 8ರ ವರೆಗೆ ನಡೆಯಿತು. ವಿಶ್ವದ ಅತಿ ದೊಡ್ಡ ರಂಗಭೂಮಿ ಆಚರಣೆಯಾದ ಥಿಯೇಟರ್ ಒಲಿಂಪಿಕ್ಸ್ ನವದೆಹಲಿ ಮಾತ್ರವಲ್ಲದೇ ಭೋಪಾಲ್, ಬೆಂಗಳೂರು, ಚಂಡಿಗಡ, ಜೈಪುರ, ಕೋಲ್ಕೋತಾ, ವಾರಣಾಸಿ ಮೊದಲಾದ ನಗರಗಳಲ್ಲೂ ನಡೆದು ವಿಶ್ವದ ಪ್ರಸಿದ್ಧ ರಂಗಕರ್ಮಿಗಳ ಅತ್ಯುತ್ತಮ ನಾಟಕಗಳು ಪ್ರದರ್ಶನಗೊಂಡವು. ಖ್ಯಾತ ರಂಗಕರ್ಮಿ ಎಂ.ಎಸ್. ಸತ್ಯು ನಿರ್ದೇಶಿಸಿದ ಗುಲ್ ಏ ಬಕಾವಲಿ ಜತೆಗೆ ಕನ್ನಡದ ಹಲವು ನಿರ್ದೇಶಕರ ನಾಟಕಗಳು ಈ ಅಂತರಾಷ್ಟ್ರೀಯ ಉತ್ಸವದಲ್ಲಿ ಪ್ರದರ್ಶನಗೊಂಡಿರುವುದು ಕನ್ನಡ ರಂಗಭೂಮಿಗೆ ಹೆಮ್ಮೆಯ ಸಂಗತಿಯಾಗಿದೆ. ಜತೆಗೆ ಇಂಟರ್ ನ್ಯಾಷನಲ್ ಥಿಯೇಟರ್ ಇನ್‌ಸ್ಟಿಟ್ಯೂಟ್ 1961ರಲ್ಲಿ ನಿರ್ಧರಿಸಿದಂತೆ ಮಾರ್ಚ್ 27ರಂದು ವಿಶ್ವ ರಂಗಭೂಮಿ ದಿನವನ್ನು ಕೂಡಾ ವಿಶ್ವದೆಲ್ಲೆಡೆ ಆಚರಿಸಲಾಯಿತು.

ಥಿಯೇಟರ್ ಒಲಿಂಪಿಕ್ಸ್ ಮತ್ತು ವಿಶ್ವ ರಂಗಭೂಮಿ ದಿನ ರಂಗಭೂಮಿಯಲ್ಲಿ ನಟ, ನಿರ್ದೇಶಕ, ತಂತ್ರಜ್ಞ ಮತ್ತು ರಂಗಭೂಮಿಯ ಗಂಭೀರ ವಿದ್ಯಾರ್ಥಿಯಾಗಿರುವವರಿಗೆ ಮಹತ್ವದ ಅವಕಾಶಗಳು. ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವವರು ಇಂತಹ ಸಂದರ್ಭಗಳಲ್ಲಿ ಪಡೆಯುವ ಅನುಭವ ಮುಂದೆ ಅವರು ಮಾಡುವ ರಂಗಪ್ರಯೋಗಗಳ ಮೇಲೆ ಉತ್ತಮ ಪರಿಣಾಮಗಳನ್ನು ಬೀರುತ್ತವೆ. ರಂಗಭೂಮಿಯೆಂಬುದು ಒಂದು ಕಲೆಯೆಂದು ನಾವು ತೆಗೆದುಕೊಂಡರು ಕೂಡಾ ಅದು ವೈಯಕ್ತಿಕವಾಗಿ ಅದರಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗೆ ಮತ್ತು ಅದರ ಅನುಭವವನ್ನು ಪಡೆಯುವ ಸಮಾಜಕ್ಕೆ ವಿಶಿಷ್ಟ ರೀತಿಯ ಅನುಭವವನ್ನು ಕೊಡುತ್ತದೆ. ವೈಯಕ್ತಿಕವಾಗಿ ರಂಗಭೂಮಿಯು ನಮ್ಮೊಳಗೆ ಸುಪ್ತವಾಗಿರುವ ಪ್ರತಿಭೆಯನ್ನು ಬೆಳಕಿಗೆ ತರಲು ವೇದಿಕೆಯಾಗುತ್ತದೆ. ವ್ಯಕ್ತಿಯ ಸಂಕುಚಿತ ಭಾವನೆ, ಆತ್ಮವಿಶ್ವಾಸದ ಕುಂದುಗಳನ್ನು ನಿವಾರಿಸುವ ಶಕ್ತಿಯಾಗುತ್ತದೆ. ಜತೆಗೆ ವ್ಯಕ್ತಿಯು ಒಂದು ತಂಡದೊಂದಿಗೆ ಭಾಗವಹಿಸುತ್ತಿರುವುದರಿಂದ ಅಲ್ಲಿ ಬದುಕಿನ ಸತ್ಯಗಳನ್ನು ಅರಿಯುವ ಅವಕಾಶಗಳಿರುತ್ತವೆ. ರಂಗಭೂಮಿಯಲ್ಲಿ ಪಾಲ್ಗೊಳ್ಳುವುದು ಉತ್ತಮ ಮನೋದೃಢತೆ, ಧೈರ್ಯ, ಸಹಬಾಳ್ವೆ, ತಂಡದೊಂದಿಗೆ ಕೆಲಸ ಮಾಡುವ ಮನೋಭಾವಗಳನ್ನು ಮೈಗೂಡಿಸುವಲ್ಲಿ ಸಹಾಯ ಮಾಡುತ್ತದೆ. ಸಮಾಜದ ದೃಷ್ಟಿಯಿಂದ ನೋಡಿದರೆ ರಂಗಭೂಮಿಯು ಜನಸಮುದಾಯದ ಬದುಕಿನ ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆ ಮತ್ತು ಸ್ಥಿತಿಗಳ ಮೇಲೆ ಪರಿಣಾಮಕಾರಿ ಟೀಕೆಗಳನ್ನು ಮಾಡುತ್ತವೆ.

ದೆಹಲಿಯಲ್ಲಿ ಕನ್ನಡ ರಂಗಭೂಮಿಗೆ ತನ್ನದೇ ಆದ ಇತಿಹಾಸವಿದೆ. ಕನ್ನಡ ಭಾರತಿಯ ಐತಿಹಾಸಿಕ ಮಹತ್ವದ ಜತೆಗೆ, ದೆಹಲಿ ಕರ್ನಾಟಕ ಸಂಘವು ನಡೆಸುತ್ತಿದ್ದ ಏಕಾಂಕ ನಾಟಕಗಳು ಕೂಡಾ ದೆಹಲಿಯಲ್ಲಿ ಇಲ್ಲೇ ನೆಲೆಸಿರುವ ಕನ್ನಡಿಗರ ರಂಗಭೂಮಿಯ ಚಟುವಟಿಕೆಗಳಿಗೆ ಬಹಳ ಪ್ರಮುಖ ವೇದಿಕೆಯಾಗಿತ್ತು. ಕಳೆದ ಕೆಲವು ವರ್ಷಗಳಿಂದ ದೆಹಲಿಯ ಮತ್ತು ಸುತ್ತಲಿನ ಕನ್ನಡಿಗರಲ್ಲಿ ರಂಗಭೂಮಿಯ ಮೇಲೆ ಹೆಚ್ಚು ಆಸಕ್ತಿ ಮೂಡಿ ಬಂದರು ಕೂಡಾ ಅವಕಾಶಗಳು ಕುಂಠಿತವಾಗಿರುವುದು ಕಂಡು ಬರುತ್ತದೆ. ಕಳೆದ ಎರಡು ವರ್ಷಗಳಲ್ಲಿ ಎರಡು ಪ್ರಮುಖ ಪ್ರಯೋಗಗಳನ್ನು ಬಿಟ್ಟರೆ ದೆಹಲಿಯ ಕನ್ನಡ ರಂಗಭೂಮಿ ಸ್ತಬ್ಧವಾಗಿದೆ. ಸ್ಥಳೀಯವಾಗಿ ಹಲವಾರು ಕ್ರಿಯಾಶೀಲ ರಂಗಾಸಕ್ತರು ಪ್ರದರ್ಶನಗಳಲ್ಲಿ ತೊಡಗಿಸಿಕೊಂಡು ಹೊಸ ಪ್ರಯೋಗಗಳನ್ನು ಮಾಡಲು ದೆಹಲಿ ಕರ್ನಾಟಕ ಸಂಘವು ಸಾಂಸ್ಕೃತಿಕ ಸಮುಚ್ಛಯದ ವೇದಿಕೆಯ ಪರದೆಯನ್ನು ತೆರೆದು ಕೊಡಬೇಕು. ದೆಹಲಿಯ ಕನ್ನಡ ರಂಗಭೂಮಿ ಮರುಚೇತನ ಪಡೆದು ಹೆಚ್ಚು ಹೆಚ್ಚು ಹೊಸ ಪ್ರಯೋಗಗಳು ನಡೆಯಬೇಕು. ಅ

ಬಾಲಕೃಷ್ಣ ನಾಯ್ಕ್ ಡಿ.




ಚಿತ್ರ : ಕು. ಪ್ರಿಯಾಂಕ

ಕರ್ನಾಟಕದ ಹೆಮ್ಮೆಯ ವೀರರಾಣಿ ಅಬ್ಬಕ್ಕ ರಾಷ್ಟ್ರೀಯ ಉತ್ಸವವು ರಾಷ್ಟ್ರದ ರಾಜಧಾನಿಯಲ್ಲಿ ಮಾರ್ಚ್ 11 ರಿಂದ 18ರವರೆಗೆ ನಡೆಯಿತು. ಕನ್ನಡ, ತುಳು, ಮರಾಠಿ, ತೆಲುಗು, ಮಲೆಯಾಳಂ, ತಮಿಳು, ಹಿಂದಿ, ಇಂಗ್ಲಿಷ್ ಮುಂತಾದ ಭಾಷೆಗಳಲ್ಲಿ ವಿಶೇಷ ಭಾಷಣಗಳು ಮತ್ತು ಸೆಮಿನಾರ್‌ಗಳು ನಡೆದು ವಿದ್ವಾಂಸರಲ್ಲಿ ಮತ್ತು ಶಿಕ್ಷಣ ತಜ್ಞರಲ್ಲಿ ಅಬ್ಬಕ್ಕನ ಕುರಿತು ವಿಶೇಷ ಆಸಕ್ತಿ ಮೂಡಿತು. ಅಲ್ಲದೆ ನವದೆಹಲಿಯ ಇಂಡಿಯಾಗೇಟಿನಲ್ಲಿ ನಡೆದ ಹುಲಿವೇಷ ಕುಣಿತವು ಕೂಡಾ ಅಬ್ಬಕ್ಕನ ಐತಿಹಾಸಿಕ ಅಸ್ತಿತ್ವವನ್ನು ಚರಿತ್ರೆಯ ಪುಟಗಳಲ್ಲಿ ಸೇರಿಸಲು ಪ್ರೇರೇಪಿಸಿತು. ಅಭಿಮತದ ಈ ಸಂಚಿಕೆಯಲ್ಲಿ ವಿವರವಾದ ವರದಿಗಳನ್ನು ನೀಡಿದ್ದೇವೆ.

ಸಂಪಾದಕರು




# ನಂದಿನಿ ಕೆ.ಆರ್. ಅವರಿಗೆ ಸಂಘದಿಂದ ಅಭಿನಂದನೆ

ದೆಹಲಿ ಕರ್ನಾಟಕ ಸಂಘದ ಪರವಾಗಿ ಐ.ಎ.ಎಸ್.ನಲ್ಲಿ ಪ್ರಥಮ ರ್‍ಯಾಂಕ್ ಪಡೆದ ಕು. ನಂದಿನಿ ಕೆ.ಆರ್. ಅವರನ್ನು ಶ್ರೀಕ್ಷೇತ್ರ ಧರ್ಮಸ್ಥಳದ ಶ್ರೀಮತಿ ಅನಿತಾ ಸುರೇಂದ್ರ ಕುಮಾರ್ ಮತ್ತು ಶ್ರೀ ಡಿ. ಸುರೇಂದ್ರ ಕುಮಾರ್ ಹಾಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಹಾಗೂ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ಅಭಿನಂದಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಕು. ನಂದಿನಿ ಅವರು ಒಂದು ಚಿಕ್ಕ ಮಗುವಾಗಿ ಹೆಣ್ಣು ಮಗು ಹುಟ್ಟಿದ ತಕ್ಷಣ ಬಹಳಷ್ಟು ಆಶೆಗಳನ್ನು, ಕನಸುಗಳನ್ನು ಹೊತ್ತುಕೊಂಡು ತನ್ನ ಭವಿಷ್ಯ ಹೀಗಿರಬೇಕು, ಹಾಗಿರಬೇಕು ಎಂಬ ಕಲ್ಪನೆಯನ್ನು ಕಟ್ಟಿಕೊಂಡಿರುತ್ತಾರೆ. ಅದಕ್ಕೆ ಸಕಾರವಾಗಿ ಸಮಾಜ ನಿಂತಾಗ ಏನನ್ನಾದರೂ ಸಾಧಿಸುವಂತಹ ಒಂದು ಶಕ್ತಿ ಇದೆ ಎಂದು ತೋರಿಸಿಕೊಟ್ಟಿದ್ದು ಅಬ್ಬಕ್ಕ ದೇವಿ. ಅಂತಹ ವೀರ ಮಹಿಳೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಆಚರಣೆ ಮಾಡುತ್ತಾ ಇದ್ದೇವೆ ಅಂದ್ರೆ ನಾವು ಎಲ್ಲೋ ಒಂದು ಪ್ರೇರಣೆಗಾಗಿ ಹುಡುಕಿಕೊಳ್ಳುವ ಅವಶ್ಯಕತೆ ಇಲ್ಲ, ನಮ್ಮಲ್ಲೇ ನಮ್ಮ ಪಕ್ಕದಲ್ಲೇ, ನಮ್ಮ ನಾಡಿನಲ್ಲೇ ಇರುವ ಅಬ್ಬಕ್ಕ ದೇವಿ ಇವತ್ತು ಮಾರ್ಗದರ್ಶನ. ಸುಮಾರು 16ನೇ ಶತಮಾನದಲ್ಲಿ ಆಕೆಗೆ ಬೆಂಬಲ ಯಾರೂ ಇಲ್ಲ, ಮದುವೆಯಾದ ನಂತರ ಬೇರೆ ಒಂದು ಪ್ರದೇಶಕ್ಕೆ ಹೋಗಿ, ಗಂಡನಿಂದ ದೂರವಾಗಿ ನಂತರ ಬಂದು ಉಳ್ಳಾಲದಲ್ಲಿ ಅಂದಿನ ಕಾಲದಲ್ಲೇ ಪೋರ್ಚುಗೀಸರ ವಿರುದ್ಧ ಹೋರಾಡಿ ಮೊದಲ ಭಾರತದ ಸ್ವಾತಂತ್ರ್ಯದ ಹೋರಾಟಗಾರ್ತಿ ಎಂದು ಹೆಸರು ಪಡೆದ ಆಕೆ ಅಬ್ಬಕ್ಕ ದೇವಿ. ಆಕೆ ಎಷ್ಟು ಕಷ್ಟಗಳ ನಡುವೆ ಕೂಡ ವಸಾಹತುಶಾಹಿಯ ವಿರುದ್ಧ ಹೋರಾಡಿ ತನ್ನ ನಾಡನ್ನು ಬೇರೆಯವರ ಪಾಲಾಗದಂತೆ ಕಾಪಾಡಿದ ಧೀರ ಮಹಿಳೆ ಎಂದರು.

ನನ್ನ ಕಡೆಯಿಂದ ಸಾಧ್ಯವಾಗಿರುವಷ್ಟು ದೆಹಲಿ ಕರ್ನಾಟಕ ಸಂಘದ ಮಕ್ಕಳಿಗೆ, ಕನ್ನಡಿಗರು ಎಲ್ಲೇ ಇದ್ದರೂ ಸಹ ಅವರಿಗೆ ಆಗುವಂತಹ ಪ್ರೋತ್ಸಾಹ, ಮಾರ್ಗದರ್ಶನ ನೀಡಲು ಸದಾ ಸಿದ್ಧ ಎಂದರು. ಅ

***ಅಭಿಮತ ವರದಿ***





# ದೆಹಲಿಯಲ್ಲಿ ಅಬ್ಬಕ್ಕ ರಾಷ್ಟ್ರೀಯ ಉತ್ಸವ

## ಮಂಗಳೂರು ವಿಮಾನ ನಿಲ್ದಾಣಕ್ಕೆ ವೀರರಾಣಿ ಅಬ್ಬಕ್ಕನ ಹೆಸರಿಡಲು ಒತ್ತಾಯ

ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ ಹಾಗೂ ದಕ್ಷಿಣ ಕನ್ನಡ ಜಿಲ್ಲಾಡಳಿತ ಅಬ್ಬಕ್ಕ ಉತ್ಸವ ಸಮಿತಿಯು ಆಯೋಜಸಿದ ರಾಣಿ ಅಬ್ಬಕ್ಕ ರಾಷ್ಟ್ರೀಯ ಉತ್ಸವ ಕಾರ್ಯಕ್ರಮವು ಸಂಘದ ಸಭಾಂಗಣದಲ್ಲಿ ಮತ್ತು ದೆಹಲಿಯ ವಿವಿಧ ಕಡೆಗಳಲ್ಲಿ ಮಾರ್ಚ್ 11ರಿಂದ 18ರವರೆಗೆ ಅತ್ಯಂತ ಯಶಸ್ವಿಯಾಗಿ ನಡೆಯಿತು.

ವಾರವಿಡೀ ವಿವಿಧ ಭಾಷೆಗಳಲ್ಲಿ ತುಳುನಾಡ ವೀರರಾಣಿ ಅಬ್ಬಕ್ಕಳ ಕುರಿತು ವಿಚಾರ ಸಂಕಿರಣಗಳು ನಡೆದು ವೀರರಾಣಿ ಅಬ್ಬಕ್ಕಳನ್ನು ಚಾರಿತ್ರಿಕವಾಗಿ ಗುರುತಿಸಲು ಹಲವು ಠರಾವುಗಳನ್ನು ಮಾರ್ಚ್ 18ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಮಂಡಿಸಲಾಯಿತು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಂಗಳೂರು ವಿಮಾನ ನಿಲ್ದಾಣಕ್ಕೆ ವೀರರಾಣಿ ಅಬ್ಬಕ್ಕನ ಹೆಸರಿಡುವುದು, ಮಂಗಳೂರಿನ ಉಲ್ಲಾಳದಲ್ಲಿ ರಾಣಿ ಅಬ್ಬಕ್ಕನ ಪ್ರತಿಮೆಯನ್ನು ನಗರದ ಮುಖ್ಯ ಸ್ಥಳದಲ್ಲಿ ಸ್ಥಾಪನೆ ಮಾಡುವುದು, ಸರಕಾರ ಲಕ್ಕುಂಡಿ ಉತ್ಸವ ಹಾಗೂ ಹಂಪಿ ಉತ್ಸವದ ಮಾದರಿಯಲ್ಲಿ ಪ್ರತಿವರ್ಷ ಜಿಲ್ಲಾ ಕೇಂದ್ರ ಮಂಗಳೂರಿನಲ್ಲಿ ಅಬ್ಬಕ್ಕ ರಾಣಿ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸುವುದು, ಅತಿಮಬ್ಬೆ ಪ್ರಶಸ್ತಿ ಮಾದರಿಯಲ್ಲಿ ಪ್ರತಿ ವರ್ಷ ರಾಣಿ ಅಬ್ಬಕ್ಕ ಪ್ರಶಸ್ತಿಯನ್ನು ಕರ್ನಾಟಕ ಸರಕಾರದ ವತಿಯಿಂದ ನೀಡುವುದು, ಮಂಗಳೂರು ರೈಲ್ವೇ ನಿಲ್ದಾಣದಿಂದ ಹೊರಡುವ ಯಾವುದಾದರೂ ರೈಲಿಗೆ ವೀರರಾಣಿ ಅಬ್ಬಕ್ಕನ ಹೆಸರಿಡುವುದು, ಮಂಗಳೂರು ವಿಶ್ವವಿದ್ಯಾಲಯಕ್ಕೆ ವೀರರಾಣಿ ಅಬ್ಬಕ್ಕ ರಾಣಿ ಹೆಸರಿಡುವುದು ಮತ್ತು ಪಠ್ಯಪುಸ್ತಕದಲ್ಲಿ ವೀರರಾಣಿ ಅಬ್ಬಕ್ಕ ಚರಿತ್ರೆ ಸೇರಿಸುವುದಕ್ಕಾಗಿ ಠರಾವುಗಳನ್ನು ಮಂಡಿಸಿದರು.

ರಾಣಿ ಅಬ್ಬಕ್ಕ ಉತ್ಸವ ನಡೆಯುತ್ತಿರುವ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ ರಾಜ್ಯಸಭಾ ಸದಸ್ಯರಾದ ಶ್ರೀ ಆಸ್ಕರ್ ಫರ್ನಾಂಡಿಸ್ ಅವರು ಅಬ್ಬಕ್ಕ ಉತ್ಸವದಲ್ಲಿ ಕಾರ್ಯಕ್ರಮ ನೀಡಲು ಬಂದಿರುವ ಕಲಾವಿದರನ್ನು ಉದ್ದೇಶಿಸಿ ಮಾತನಾಡಿ, ಅಭಿನಂದಿಸಿ ಶುಭ



ಹಾರೈಸಿದರು. ಇತಿಹಾಸದ ಪುಟಗಳಲ್ಲಿ ಸೇರಿ ಹೋಗಿರುವ ರಾಣಿ ಅಬ್ಬಕ್ಕನ ಒಂದು ನೆನಪನ್ನು ಮಾಡುತ್ತಾ ಅವಳ ಶೌರ್ಯ, ಸಾಹಸ, ಪ್ರತಿಭೆ ನಮ್ಮನ್ನು ಹುರಿದುಂಬಿಸುತ್ತದೆ ಎಂದು ಅವರು ಹೇಳಿದರು. ಅಬ್ಬಕ್ಕನ ಒಂದು ಸಾಹಸಮಯ ಜೀವನ ಎಲ್ಲರಿಗೂ ಮಾರ್ಗದರ್ಶನವಾಗಲಿ ಎಂದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ ಖ್ಯಾತ ಚಿತ್ರಕಲಾವಿದ ಹಾಗೂ ಕೇಂದ್ರ ಲಲಿತ ಕಲಾ ಅಕಾಡೆಮಿಯ ಆಡಳಿತಾಧಿಕಾರಿ ಚಿ.ಸು. ಕೃಷ್ಣ ಸೆಟ್ಟಿ ಅವರು ಮಾತಾಡುತ್ತಾ ಇತಿಹಾಸದಲ್ಲಿ ಅವಾಸ್ತವಿಕ ಅಂಶಗಳನ್ನು ತುರುಕಲಾಗಿದ್ದು, ಇತಿಹಾಸದ ಮರುಪರಿಶೀಲನೆ ಆಗಬೇಕಿದೆ. ರಾಣಿ ಅಬ್ಬಕ್ಕ ಅವರಿಗೆ ಇತಿಹಾಸದಲ್ಲಿ ಸೂಕ್ತ ಸ್ಥಾನಮನ್ನಣೆ ಸಿಗಬೇಕು. ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಝಾನ್ಸಿ ಅವರಂತೆ ಪಠ್ಯದಲ್ಲಿ ಹಾಗೂ ಸಮಾಜದಲ್ಲಿ ಅಬ್ಬಕ್ಕನವರ ಹೋರಾಟ, ಧೀಮಂತಿಕೆಯನ್ನು ಸಾರುವ ಅಗತ್ಯವಿದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ದೆಹಲಿ ಸರಕಾರದ ಜಿಎಸ್‌ಟಿ ಕಮಿಷನರ್, ಐಎಎಸ್ ಅಧಿಕಾರಿ ರಾಜೇಶ್ ಪ್ರಸಾದ್ ಅವರು ಮಾತಾಡುತ್ತಾ ಪೋರ್ಚುಗೀಸರನ್ನು ಹಲವು ಯುದ್ಧಗಳಲ್ಲಿ ಸೋಲಿಸಿದ ದಿಟ್ಟ ಮಹಿಳೆ ಅಬ್ಬಕ್ಕ. 16ನೇ ಶತಮಾನದಲ್ಲಿ ಅತ್ಯಾಧುನಿಕ ಸೈನ್ಯ ಹೊಂದಿದ್ದ ಪೋರ್ಚುಗೀಸರನ್ನು ತಮ್ಮ ಸಾಂಪ್ರದಾಯಿಕ ಯುದ್ಧ ಪರಿಣತಿ ಮೂಲಕ ಮಣಿಸಿದ ಅಬ್ಬಕ್ಕ ಅವರ ಸಾಧನೆ ಶೌರ್ಯದ ಪ್ರತೀಕ ಎಂದರು.

ರಾಣಿ ಅಬ್ಬಕ್ಕ ದೇಶದಲ್ಲೇ ಮೊತ್ತ ಮೊದಲ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿದ್ದರೂ ಕರ್ನಾಟಕದ ಅಥವಾ ದೇಶದ ಚರಿತ್ರೆಯಲ್ಲಿ ಸೂಕ್ತ ಸ್ಥಾನ ಸಿಗದಿರುವುದು ವಿಷಾದನೀಯ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಪ್ರಾಸ್ತವಿಕ ನುಡಿಯಲ್ಲಿ ತಿಳಿಸಿದರು. ಅವರ ಸಾಧನೆಯನ್ನು ದೇಶಾದ್ಯಂತ ಪ್ರಚುರಪಡಿಸಬೇಕಿದೆ. ಈ ನಿಟ್ಟಿನಲ್ಲಿ ವೀರರಾಣಿ ಅಬ್ಬಕ್ಕ ರಾಷ್ಟ್ರೀಯ ಉತ್ಸವವನ್ನು ಒಂದು ವಾರಗಳ ಕಾಲ ದೆಹಲಿಯ ವಿವಿಧ ಭಾಗಗಳಲ್ಲಿ, ಬೇರೆಬೇರೆ ಭಾಷೆಗಳಲ್ಲಿ ಆಯೋಜಿಸುತ್ತಿದ್ದೇವೆ ಎಂದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸರವು ಕೃಷ್ಣ ಭಟ್ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ ಅಬ್ಬಕ್ಕ ಅವರ ಮೂಲ ಜೈನರಾಗಿದ್ದ ಅಬ್ಬಕ್ಕ ವಿದೇಶಿಯರನ್ನು ಓಡಿಸಲು ಹೋರಾಟ





ನಡೆಸಿದುದು ಅಪ್ರತಿಮವಾದುದು ಎಂದರು. ದೆಹಲಿ ತುಳು ಸಿರಿಯ ಅಧ್ಯಕ್ಷರಾದ ಶ್ರೀ ಕೆ.ಆರ್. ರಾಮಮೂರ್ತಿ ಅವರು ಮಾತನಾಡುತ್ತ ತುಳುನಾಡಿನಲ್ಲಿ ರಾಣಿ ಅಬ್ಬಕ್ಕನಂತೆಯೇ ವಿದೇಶಿಯರ ವಿರುದ್ಧ ಹೋರಾಡಿದ ಇತರ ಅನೇಕ ಹೋರಾಟಗಾರರನ್ನು ಕೂಡಾ ಗುರುತಿಸಬೇಕು ಎಂದರು.

ರಾಣಿ ಅಬ್ಬಕ್ಕ ಕುರಿತು ತುಳುವಿನಲ್ಲಿ ಉಪನ್ಯಾಸ ನೀಡಿದ ದೆಹಲಿ ಕನ್ನಡ ಶಾಲೆಯ ಅಧ್ಯಾಪಕ ಅರವಿಂದ ಬಿಜೈ ಅವರು ರಾಣಿ ಅಬ್ಬಕ್ಕ ಸಿಂಹಾಸನ ಲಾಲಸೆಗಾಗಿ ಹೋರಾಡಲಿಲ್ಲ. ಅವರ ಹೋರಾಟದಲ್ಲಿ ಸ್ವಾಭಿಮಾನವಿತ್ತು. ಪೋರ್ಚುಗೀಸರಿಗೆ ಕಪ್ಪ ಕಾಣಿಕೆ ನೀಡಬಾರದು ಎನ್ನುತ್ತಾ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧವೂ ಸೆಟೆದು ನಿಂತರು. ಆದರೆ ಪಠ್ಯ ಪುಸ್ತಕಗಳಲ್ಲಿ ಅಬ್ಬಕ್ಕ ಅವರ ಸಾಧನೆಯ ಬಗ್ಗೆ ಉಲ್ಲೇಖವಿಲ್ಲ. ಅಬ್ಬಕ್ಕರ ಬಗ್ಗೆ ಇನ್ನಷ್ಟು ಸಂಶೋಧನೆ ಆಗಬೇಕು ಎಂದು ಹೇಳಿದರು.

ಉದ್ಘಾಟನಾ ಸಮಾರಂಭದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ "ಸಂಗಮ ಕಲಾವಿದರು" ಮಣಿಪಾಲ್ ಅವರಿಂದ ತುಳು ನಾಟಕ 'ವಾಲಿವಧೆ' ಪ್ರದರ್ಶನ ನಡೆಯಿತು. ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಪೂಜಾ ರಾವ್ ಕಾರ್ಯಕ್ರಮ ನಿರೂಪಿಸಿದರು ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದಿಸಿದರು.




ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀಕ್ಷೇತ್ರ ಧರ್ಮಸ್ಥಳದ ಶ್ರೀಮತಿ ಅನಿತಾ ಸುರೇಂದ್ರ ಕುಮಾರ್ ಅವರು ತಮ್ಮ ಭಾಷಣದಲ್ಲಿ ಈ ಕಾರ್ಯಕ್ರಮದ ಮೂಲಕ ಅಬ್ಬಕ್ಕನನ್ನು ರಾಷ್ಟ್ರ ರಾಜಧಾನಿಯಲ್ಲಿ ಬೆಳಕಿಗೆ ತಂದ ಎಲ್ಲರಿಗೂ ಅವಳ ವಂಶಸ್ಥಳಾಗಿ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದರು. ಆಕೆಯ ಆಶೀರ್ವಾದದಿಂದಲೇ ನಮ್ಮ ಈ ಚೌಟ ವಂಶವೂ ಬೆಳೆದಿದೆ. ಜಾಗತಿಕ ಇತಿಹಾಸದಲ್ಲಿ ಉಳ್ಳಾಲ ರಾಣಿ ಅಬ್ಬಕ್ಕಳಿಗೆ ವಿಶಿಷ್ಠ ಸ್ಥಾನಮಾನ ಇದೆ. ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಅಬ್ಬಕ್ಕನ ಚರಿತ್ರೆಯನ್ನು ನಮ್ಮ ಎಳೆಯ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮ ಮೇಲಿದೆ. ಮಹಿಳೆಯರು ಮಹಿಳಾ ಮೀಸಲಾತಿಗೆ ಕಾಯದೆ ಸರಳತೆಯ, ಸ್ವಾಭಿಮಾನದ ಪ್ರತೀಕವಾದ ಅಬ್ಬಕ್ಕನ ಆದರ್ಶವನ್ನು ಮುನ್ನುಡಿಯಾಗಿ ಇಟ್ಟುಕೊಂಡು ದೇಶಕ್ಕಾಗಿ ಸೇವೆ ಸಲ್ಲಿಸಬೇಕು ಎಂದು ಹೇಳಿದರು. ಈ ಉತ್ಸವ ಮಾನವ ಸಂಬಂಧದ ಮನಸ್ಸುಗಳನ್ನು ಒಗ್ಗೂಡಿಸಿದೆ. ಆ ಮೂಲಕ ಕಾರ್ಯಕ್ರಮವೂ ಅರ್ಥಪೂರ್ಣವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದ ಶ್ರೀ ಡಿ. ಸುರೇಂದ್ರ ಕುಮಾರ್ ಅವರು ಮಾತನಾಡುತ್ತ ದೆಹಲಿ ಕರ್ನಾಟಕ ಸಂಘವು ಯುಗಾದಿಯಂದು ರಾಣಿ ಅಬ್ಬಕ್ಕನನ್ನು ಸ್ಮರಿಸಿರುವುದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಂಗಳೂರು ಇದರ ಸಹಾಯಕ ನಿರ್ದೇಶಕರಾದ ಶ್ರೀ ಚಂದ್ರಹಾಸ ರೈ ಬಿ. ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆಯಾದ ಶ್ರೀಮತಿ ಭಾರತೀ ಶಂಕರ್ ಅವರು ಕರಾವಳಿಯಲ್ಲಿರುವ ಮಹಿಳಾ ಪ್ರಾತಿನಿಧ್ಯವನ್ನು ನಾವು ನಿಜಕ್ಕೂ ಮೆಚ್ಚಲೇಬೇಕು. ಈ ಪ್ರಾತಿನಿಧ್ಯಕ್ಕೆ ಸುಮಾರು 450 ವರ್ಷಗಳೇ ಹಿಂದೆಯೇ ಅಬ್ಬಕ್ಕಳೇ ನಾಂದಿ ಹಾಡಿದಳು ಎಂದರು. ಜೊತೆಗೆ ಬೆಂಗಳೂರಿನಲ್ಲಿ ಅಬ್ಬಕ್ಕನ ಕಂಚಿನ ಪ್ರತಿಮೆ ಸ್ಥಾಪಿಸಲು ಮುಂದಾದವರಲ್ಲಿ ನಾನೂ ಒಬ್ಬಳು. ಆಕೆಯೇ ನನ್ನ ಜೀವನದ ಪ್ರೇರಣೆ ಎಂಬುದಾಗಿ ಹೇಳಿದರು.



ಖ್ಯಾತಿ ಸಾಹಿತಿ ಮತ್ತು ಜಾನಪದ ವಿದ್ವಾಂಸರಾದ ಪ್ರೊ. ಎ.ವಿ. ನಾವಡ ಅವರು ಮಾತನಾಡುತ್ತ ಕರಾವಳಿಯಲ್ಲಿ ಜೈನ ಅರಸು ಮನೆತನದ ಪ್ರಭಾವವೇ ಹೆಚ್ಚಾಗಿತ್ತು. 12 ರಾಣಿಯಂದಿರು ಕರಾವಳಿಯಲ್ಲಿ ರಾಜ್ಯಭಾರ ಮಾಡಿದ್ದರು. ಹಾಗಾಗಿ ಅಬ್ಬಕ್ಕನ ಅಧ್ಯಯನದ ಜೊತೆಗೆ ಕರಾವಳಿಯನ್ನು ಆಳಿದ ರಾಣಿಯಂದಿರ ಅಧ್ಯಯನವನ್ನು ನಡೆಸಬೇಕು. ಇದೇ ಸಂದರ್ಭದಲ್ಲಿ ಅಬ್ಬಕ್ಕ ಉತ್ಸವವು ಅಕಾಡೆಮಿಕ್ ಆಗಿ ನಡೆಯಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಸ್ವಾಗತಿಸಿದರು. ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ, ಉಳ್ಳಾಲದ ಪ್ರಧಾನ ಕಾರ್ಯದರ್ಶಿ  ಶ್ರೀ ಭಾಸ್ಕರ ರೈ ಕುಕ್ಕುವಳ್ಳಿ, ಕಾರ್ಯಕ್ರಮ ನಿರ್ವಹಿಸಿದರು. ಶ್ರೀಮತಿ ವಾಣಿ ವಿ. ಆಳ್ವ ಅವರು ವಂದಿಸಿದರು.

ಇದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಸಂಘದ ವತಿಯಿಂದ ಈ ಬಾರಿ ಐ.ಎ.ಎಸ್.ನಲ್ಲಿ ಪ್ರಥಮ ರ್‍ಯಾಂಕ್ ಪಡೆದ ಕು. ನಂದಿನಿ ಕೆ.ಆರ್. ಹಾಗೂ ದೆಹಲಿ ಕರ್ನಾಟಕದ ಸಂಘದಲ್ಲಿ ಸಕ್ರಿಯವಾಗಿ ಸಾಂಸ್ಕೃತಿಕ, ರಂಗ ಸಂಘಟನೆಯಲ್ಲಿ ತೊಡಗಿಸಿಕೊಂಡ ನೂರಕ್ಕೂ ಹೆಚ್ಚು ಮಹಿಳೆಯರನ್ನು ಶ್ರೀಮತಿ ಅನಿತಾ ಸುರೇಂದ್ರ ಕುಮಾರ್, ಶ್ರೀ ಸುರೇಂದ್ರ ಕುಮಾರ್, ಉಳ್ಳಾಲ ನಗರಸಭೆಯ ಆಯುಕ್ತರಾದ ಶ್ರೀಮತಿ ವಾಣಿ ವಿ. ಆಳ್ವ ಅವರು ಸನ್ಮಾನಿಸಿದರು.

ಸಮಾರೋಪ ಸಮಾರಂಭದ ನಂತರ ಮಂಗಳೂರಿನ ನೃತ್ಯಲಹರಿ, ಬನ್ನಂಜೆ ಮಹಿಳಾ ಕಲಾಬಳಗ ಮತ್ತು ಬೀದರಿನ ನೂಪುರ ನೃತ್ಯ ಅಕಾಡೆಮಿಯ ಕಲಾವಿದರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಅ

**ಅಭಿಮತ ವರದಿ**










## ರಾಣಿ ಅಬ್ಬಕ್ಕನಿಗೆ ಚರಿತ್ರೆಯ ಪುಟದಲ್ಲಿ ಸರಿಯಾದ ಸ್ಥಾನಮಾನ ಸಿಗುವಂತಾಗಬೇಕು

### ಮರಾಠಿ ಭಾಷಿಗರ ಉಪನ್ಯಾಸ ಕಾರ್ಯಕ್ರಮದಲ್ಲಿ ಪುಣೆ ವಿಶ್ವವಿದ್ಯಾಲಯದ ಶ್ರೀಮತಿ ದೋಂಗ್ದೆ ಆಲ್ಕಾ

ದೇಶಕ್ಕಾಗಿ ಜೀವದ ಹಂಗು ತೊರೆದು ತನ್ನ ಕೊನೆಯ ಉಸಿರಿನವರೆಗೆ ಹೋರಾಡಿದ ವೀರ ಮಹಿಳೆಯ ಹೆಸರು ಇತಿಹಾಸದಲ್ಲಿ ಉಳಿಯದೇ ಇರುವುದು ವಿಷಾದನೀಯ ಎಂದು ಪುಣೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಶ್ರೀಮತಿ ದೋಂಗ್ದೆ ಆಲ್ಕಾ ದೀಪಕ್ ಅವರು ಹೇಳಿದರು. ದೆಹಲಿ ಕರ್ನಾಟಕ ಸಂಘವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಗೂ ದಕ್ಷಿಣ ಕನ್ನಡ ಜಿಲ್ಲಾಡಳಿತದ ಸಹಯೋಗದೊಂದಿಗೆ ಒಂದು ವಾರದ ರಾಷ್ಟ್ರೀಯ ಅಬ್ಬಕ್ಕ ಉತ್ಸವದ ಎರಡನೇ ದಿನದಂದು ಮಾರ್ಚ್ 12ರಂದು ಮರಾಠಿ ಭಾಷಿಗರನ್ನು ಕುರಿತು ಮರಾಠಿಯಲ್ಲಿ ಉಪನ್ಯಾಸ ನೀಡಿದರು. ದೇಶದ ಪ್ರಥಮ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಚರಿತ್ರೆಯ ಪುಟದಲ್ಲಿ ಸಂಶೋಧನೆ ನಡೆಸಿ ಸರಿಯಾದ ಸ್ಥಾನಮಾನ ನೀಡಬೇಕು ಎಂದು ಹೇಳಿದರು. ರಾಣಿ ಅಬ್ಬಕ್ಕನನ್ನು ಈಗ ದೆಹಲಿ ಕರ್ನಾಟಕ ಸಂಘವು ದೇಶದ ಇತರ ಭಾಷಿಗರಿಗೂ ಪರಿಚಯಿಸಿ ಕೊಡುವ ಕೆಲಸವನ್ನು ಮಾಡುತ್ತಿರುವುದು ಸುತ್ಯಾರ್ಹ ಎಂದರು.

16ನೇ ಶತಮಾನದ ವೀರಾಂಗಣೆ ವೀರ ಮಹಿಳೆ ಉಳ್ಳಾಲದ ಮಹಾರಾಣಿಯಾದ ಅಬ್ಬಕ್ಕನ ಜೀವನ ಚರಿತ್ರೆಯನ್ನು ಸವಿಸ್ತಾರವಾಗಿ ಈ ಸಂದರ್ಭದಲ್ಲಿ ವಿವರಿಸಿದರು. ಆರು ಬಾರಿ ಪೋರ್ಚುಗೀಸರ ವಿರುದ್ಧ ಮಾಡಿದ ಯುದ್ಧದಲ್ಲಿ ಐದು ಬಾರಿ ಈಕೆ ವಿಜಯಶಾಲಿಯಾದಳು. ಮಂಗಳೂರಿನ ಭಂಗಲಕ್ಷ್ಟಪ್ಪ ಅರಸನೊಂದಿಗೆ ವಿವಾಹವಾದರೂ ವಿವಾಹವಾದ ಬಳಿಕ ಸಹ ತನ್ನ ತವರೂರಿನ ಬಗ್ಗೆ ಅಪಾರವಾದ ಪ್ರೀತಿ ಮತ್ತು ಜವಾಬ್ದಾರಿಯನ್ನು ಹೊಂದಿದ್ದಳು. ಈ ಕಾರಣದಿಂದ ತನ್ನ ಪತಿಯು ಪೋರ್ಚುಗೀಸ್‌ರೊಂದಿಗೆ ಒಳ ಒಪ್ಪಂದ ಮಾಡಿದ್ದನ್ನು ಅರಿತು ವೈಮನಸ್ಸಿನಿಂದ ತನ್ನ ತವರಿಗೆ ಮರಳಿ ಬಂದು ಪೋರ್ಚುಗೀಸ್‌ರ ವಿರುದ್ಧ ಹೋರಾಟಕ್ಕೆ ಅಣಿಯಾದಳು. 1555ರಲ್ಲಿ ಅಡ್ಮಿರಲ್ ಡಾನ್ ಅಲ್ವಾರೋ ದ ಡಿಸಿಲ್ವನನ್ನು ಸೋಲಿಸಿದಳು. 1567ರಲ್ಲಿ ಜನರಲ್ ಜಾ ಪೀಕ್ಸಿಟೋನನ್ನು ಯುದ್ಧದಲ್ಲಿ ಪರಾಭವಗೊಳಿಸಿದಳು. ಮೊಟ್ಟ ಮೊದಲು ಬಾರಿ ಅಗ್ನಿ ಬಾಣದ ಪ್ರಯೋಗವನ್ನು ಮಾಡಿದಂತಹ ವೀರಮಹಿಳೆ ಈಕೆ. ಮೂಲತ: ಜೈನಧರ್ಮದವಳಾದ ಅಬ್ಬಕ್ಕ ಕುದುರೆ ಸವಾರಿ, ಕತ್ತಿ ವರಸೆ ಬಿಲ್ಲುಬಾಣ ಇತ್ಯಾದಿ ಯುದ್ಧ ನೀತಿಗಳಲ್ಲಿ ಪಾರಂಗತಳಾಗಿದ್ದಳು. ತನ್ನ ಪ್ರಜೆಗಳ ಬಗ್ಗೆ ಅಪಾರವಾದ ಪ್ರೀತಿ ಹೊಂದಿದ್ದಳು. ಎಲ್ಲ ಧರ್ಮದ ಸೈನಿಕರೂ ಆಕೆಯ ಸೈನ್ಯದಲ್ಲಿದ್ದರು. ಜೀವದ ಹಂಗು ತೊರೆಯುವ ಮೊಗವೀರರೆಂಬ ಶೂರ ಮೀನುಗಾರರ ಪಡೆ ಅಕೆಯ ಸೈನ್ಯದ ಒಂದು ಮುಖ್ಯ ಅಂಗವಾಗಿತ್ತು.

ಈ ಕಾರ್ಯಕ್ರಮದಲ್ಲಿ ಸುಮಾರು 100ಕ್ಕೂ ಹೆಚ್ಚು ದೆಹಲಿಯ ಮರಾಠಿ ಭಾಷೆಯವರು ಭಾಗವಹಿಸಿದ್ದರು.

ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಡಾ.ಎಂ.ಎಸ್. ಶಶಿಕುಮಾರ್ ಅವರು ಕಾರ್ಯಕ್ರಮವನ್ನು ನಿರೂಪಣೆ ಮಾಡಿದರು ಹಾಗೂ ಶ್ರೀ ಸಿ.ಎಂ.ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಅವರು ವಂದಿಸಿರು. ಈ ಕಾರ್ಯಕ್ರಮದ ಸಂಚಾಲಕತ್ವವನ್ನು ಶ್ರೀಮತಿ ಸವಿತಾ ಇನಾಂದಾರ್ ಅವರು ವಹಿಸಿದ್ದರು. ಅ

## ಹಿಂದಿ ಭಾಷೆಯಲ್ಲಿ ಅಬ್ಬಕ್ಕ ರಾಣಿಯ ಕುರಿತಾಗಿ ವಿಚಾರ ಸಂಕಿರಣ




ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಇದೇ ಮಾರ್ಚ್ 13ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ ಹಾಗೂ ದಕ್ಷಿಣ ಕನ್ನಡ ಜಿಲ್ಲಾಡಳಿತ ಅಬ್ಬಕ್ಕ ಉತ್ಸವ ಸಮಿತಿ ಆಯೋಜಿಸಿದ್ದ ರಾಣಿ ಅಬ್ಬಕ್ಕ ಉತ್ಸವದ ಪ್ರಯುಕ್ತ ಹಿಂದಿ ಭಾಷೆಯಲ್ಲಿ ಅಬ್ಬಕ್ಕ ರಾಣಿಯ ಕುರಿತಾಗಿ ವಿಚಾರ ಸಂಕಿರಣ ಕಾರ್ಯಕ್ರಮವು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ದೆಹಲಿ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಡಾ. ಕೈಲಾಶ್ ಕುಮಾರ್ ಮಿಶ್ರಾ ಅವರು ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಕರ್ನಾಟಕದ ಕರಾವಳಿಯು ತನ್ನದೇ ಆದ ವಿಶಿಷ್ಟತೆ ಪಡೆದುಕೊಂಡಿದೆ. ದೇಶದ ಸ್ವಾತಂತ್ರ್ಯ ಹೋರಾಟಕ್ಕಾಗಿ ಕರ್ನಾಟಕದ ಕೊಡುಗೆ ಕಡಿಮೆ ಎಂಬ ಅಪವಾದವಿದೆ. ಆದರೆ ಸ್ವಾತಂತ್ರ್ಯ ಹೋರಾಟದ ಆರಂಭದ ಕುರುಹುಗಳನ್ನು ನಾವು ಕಾಣುವುದೇ ಇಲ್ಲಿಯೇ. ಇದಕ್ಕೆ ಸಾಕ್ಷಿಯೇ ವೀರ ರಾಣಿ ಅಬ್ಬಕ್ಕ. ತನ್ನಲ್ಲಿದ್ದ ಸ್ವಾಭಿಮಾನ ಹಾಗೂ ಆತ್ಮಸ್ಥೈರ್ಯವನ್ನು ನಾಡಿಗಾಗಿ, ಜನತೆಗಾಗಿ ಸಮರ್ಪಿಸಿ, ತನ್ನ ಕೆಚ್ಚೆದೆಯ ನಿರಂತರ ಹೋರಾಟದ ಮೂಲಕ ಮಾತೃಶಕ್ತಿಯನ್ನು ಪರಕೀಯರಿಗೆ ಪರಿಚಯಿಸಿದವಳು ರಾಣಿ ಅಬ್ಬಕ್ಕ. ಕೇವಲ ರಸ್ತೆಗಳಿಗೆ ಅವಳ ಹೆಸರಿಟ್ಟರೆ ಅಥವಾ ಅವಳ ಪ್ರತಿಮೆಯನ್ನು ಸ್ಥಾಪಿಸಿದರೆ ಸಾಲದು. ಬದಲಾಗಿ ಆಕೆಯ ಕುರಿತಾಗಿ ಪ್ರತಿಯೊಬ್ಬನೂ ತಿಳಿದು ಇತರರಿಗೆ ತಿಳಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಇನ್ನೊರ್ವ ಸಂಪನ್ಮೂಲ ವ್ಯಕ್ತಿ, ಸಾಮಾಜಿಕ ಕಾರ್ಯಕರ್ತರಾದ ಪುನೀತ್ ಸೂದ್ ಅವರು ರಾಣಿ ಅಬ್ಬಕ್ಕನ ಕುರಿತಾಗಿ ಮಾತನಾಡುತ್ತಾ ನಮ್ಮ ಚರಿತ್ರೆಗಳು ನಮ್ಮ ದೇಶ ಗುಲಾಮಗಿರಿಯಲ್ಲಿತ್ತು ಎಂದು ವೈಭವೀಕರಿಸಿವೆ. ಆದರೆ ನಮ್ಮವರು ಪರಕೀಯರ ವಿರುದ್ಧ ಸದಾ ಸಂಘರ್ಷವನ್ನು ಮಾಡುತ್ತಾ ಬಂದವರು. ಹಾಗಾಗಿ ಗುಲಾಮಗಿರಿಯ ಮಾತೇ ಇಲ್ಲಿ ಅಪ್ರಸ್ತುತ. ಇದಕ್ಕೆ ಜೀವಂತ ನಿದರ್ಶನ ಸ್ವಾಭಿಮಾನದ ಪ್ರತೀಕವಾದ ರಾಣಿ ಅಬ್ಬಕ್ಕ. ಜೊತೆಗೆ ಇಂತಹ ಮಹಾನ್ ಹೋರಾಟಗಾರ್ತಿಯನ್ನು ಕಾರ್ಯಕ್ರಮದ ಮೂಲಕ ಜನರಿಗೆ ಪರಿಚಯಿಸುವ ದುರ್ದೈವ ಸ್ಥಿತಿ ನಮ್ಮದಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಕಾರ್ಯಕ್ರಮ ಸಂಯೋಜಕರಾದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಎಸ್. ಕೃಷ್ಣ ಭಟ್ ಅವರು ಮಾತನಾಡಿ ನಮ್ಮ ಸ್ವಾತಂತ್ರ್ಯ ಹೋರಾಟದ ಹೆಜ್ಜೆಗಳಲ್ಲಿ ನಮ್ಮವರು ಬ್ರಿಟಿಷರ ವಿರುದ್ಧ ಹೋರಾಡಿದ ಕಥನಗಳ ಅತಿ ಮಹತ್ವವನ್ನು

# ರಾಣಿ ಅಬ್ಬಕ್ಕನ ಸರಳತೆಯನ್ನು ಇಂದಿನ ಅಧಿಕಾರಿಗಳು ಮಾದರಿಯಾಗಿ ಸ್ವೀಕರಿಸಬೇಕು

## ಮಲೆಯಾಳಂ ಭಾಷೆ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಶೋಧಕಿ ಟಿಂಟುಮೋಳ್ ಜೋಸೆಫ್




ಅಬ್ಬಕ್ಕ ರಾಣಿ ಒಬ್ಬ ವೀರ ಯೋಧೆ ಮಾತ್ರವಲ್ಲ ನ್ಯಾಯತಂತ್ರ ಮತ್ತು ರಾಜತಂತ್ರದಲ್ಲಿ ಕೂಡ ಅಗ್ರಗಣ್ಯೆ. ತನ್ನ ರಾಜಪ್ರಭುತ್ವ ಮತ್ತು ರಾಜ್ಯದ ಸಾರ್ವಭೌಮತ್ವವನ್ನು ಸಾಮ್ರಾಜ್ಯಶಕ್ತಿಗಳಿಂದ ಕಾಪಾಡಲು ಯುದ್ಧತಂತ್ರ ಮತ್ತು ನ್ಯಾಯತಂತ್ರವನ್ನು ಬಳಸಿದ್ದಲ್ಲದೆ, ಅವರು ಉತ್ತಮ ಆಡಳಿತಗಾರ್ತಿಯೂ ಕೂಡ ಆಗಿದ್ದರು. ಉಳ್ಳಾಲದ ಧಾರ್ಮಿಕ ವೈವಿಧ್ಯತೆಯಲ್ಲೂ ಎಲ್ಲಾ ಧರ್ಮಕ್ಕೆ ಸೇರಿದವರು ಇದ್ದರೂ ಕೂಡ ರಾಣಿಯ ಹಿಂದೆ ಒಂದು ದಳವಾಗಿ ಹೋರಾಡಿದರು ಎಂಬುವುದು ಮಹತ್ವಪೂರ್ಣವಾಗಿದೆ ಎಂದು ಕು. ಟಿಂಟು ಮೋಳ್ ಜೋಸೆಫ್ ಅವರು ಮಲೆಯಾಳಂನಲ್ಲಿ ಉಪನ್ಯಾಸ ನೀಡುತ್ತಾ ಹೇಳಿದರು.

16ನೇ ಶತಮಾನದಲ್ಲಿ ಬದುಕಿದ್ದ ಈ ಧೀರವನಿತೆಯ ಜೀವನ, ಚಿಂತನೆಗಳು ಮತ್ತು ರಾಜನೀತಿ ಇಂದಿಗೂ ಪ್ರಸಕ್ತವಾಗಿದೆ. ಅವರ ಸರಳತೆ ಇಂದಿನ ಅಧಿಕಾರಿಗಳು ಮಾದರಿಯಾಗಿ ಸ್ವೀಕರಿಸಬೇಕು. ಭಾರತದ ಇತರ ರಾಣಿಗಳ ಶ್ರೇಣಿಯಲ್ಲಿ ರಾಣಿ ಅಬ್ಬಕ್ಕ ಅವರಿಗೂ ಕೂಡ ಅರ್ಹವಾದ ಸ್ಥಾನ ಸಿಗಲೇಬೇಕು, ಅವರ ರಾಜನೀತಿ ಇಂದಿಗೂ ಹಳೆಯದಾಗುವುದಿಲ್ಲ. ಅದು ಸಹಿಷ್ಣುತೆಯ, ಜಾತ್ಯಾತೀತತೆಯ, ರಾಜತಂತ್ರದ, ಅಂತರ್ ದರ್ಶನದ ಮತ್ತು ಆತ್ಮ ಸಂಕಲ್ಪದ ರಾಜನೀತಿ. ಇಂತಹ ಒಂದು ರಾಷ್ಟ್ರ ನಿರ್ಮಾಣಕ್ಕೆ ಈಕೆಯ ಚರಿತ್ರೆನ್ನು ಅಧ್ಯಯನ ಮಾಡುವುದು ಮಹತ್ವಪೂರ್ಣವಾಗಿದೆ.

ಮಹಿಳೆಯರ ಸ್ವಾತಂತ್ರ್ಯ ಮತ್ತು ಸ್ವಯಂ ಸಮರ್ಥನೆ ಚರ್ಚೆಯಾಗುತ್ತಿರುವ ಈ ಕಾಲದಲ್ಲಿ ರಾಣಿ ಅಬ್ಬಕ್ಕ ನಮ್ಮ ದೇಶದ ಆದರ್ಶ ಮಹಿಳೆಯಾಗಿದ್ದಾರೆ. ಇತಿಹಾಸ ಭವಿಷ್ಯಕ್ಕೆ ಕೊಡುವ ಪಾಠಗಳಿಂದ ಅರ್ಥಪೂರ್ಣವಾಗುತ್ತದೆ ಎಂದು ಹೇಳುತ್ತಾರೆ. ರಾಣಿ ಅಬ್ಬಕ ನಮ್ಮ ಮತ್ತು ಮುಂದೆ ಬರುವ ಪೀಳಿಗೆಗೆ ಶ್ರೇಷ್ಠವಾದ ಒಂದು ಪಾಠ. ಇವರ ಇತಿಹಾಸದ ಸಂಶೋಧನೆಗೆ ಹೆಚ್ಚು ಸಂಶೋಧನಾ ವಿದ್ವಾಂಸರು ಮುಂದುವರಿಯಬೇಕು ಹಾಗು ಅಬ್ಬಕ್ಕ ರಾಣಿಯ ಕಥೆಯನ್ನು ಒಂದು ದೇಶೀಯ ವಾದವಾಗಿ ಮಾತ್ರವಲ್ಲದೆ ಸಾರ್ವಜನಿಕ ಆಡಳಿತ ಮತ್ತು ನಯತಂತ್ರ ಶಾಸ್ತ್ರದ ದೃಷ್ಟಿಯಲ್ಲೂ ಅಧ್ಯಯನ ಮಾಡಬೇಕು ಎಂದು ದೆಹಲಿ ಕರ್ನಾಟಕ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾಡಳಿತ ಮಾರ್ಚ್ 14ರಂದು ಆಯೋಜಿಸಿದ್ದ ರಾಣಿ ಅಬ್ಬಕ್ಕ ಉತ್ಸವದ ಪ್ರಯುಕ್ತ ಮಲೆಯಾಳಂ ಭಾಷೆಯಲ್ಲಿ ಅಬ್ಬಕ್ಕ ರಾಣಿಯ ಕುರಿತಾಗಿ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಕು. ಟಿಂಟು ಮೋಳ್ ಜೋಸೆಫ್ ಅಭಿಪ್ರಾಯಪಟ್ಟರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ನಾವು ದಕ್ಷಿಣ ಭಾರತೀಯರು ಮುಖ್ಯವಾಗಿ ಪಂಚದ್ರಾವಿಡ ಭಾಷೆಯವರು ದೇಶದ ರಾಜಧಾನಿಯಲ್ಲಿ ಒಟ್ಟಾಗಬೇಕು. ದೆಹಲಿಯ ರಾಜನೀತಿಯಲ್ಲಿ ನಮ್ಮ ಒಗ್ಗಟ್ಟಿನ ಮೂಲಕ ದಕ್ಷಿಣ ಭಾರತೀಯರಿಗೆ ಸಿಗಬೇಕಾದ ಮಾನ್ಯತೆ ಸಿಗುವಂತೆ ಪ್ರಯತ್ನಿಸಬೇಕು ಎಂದರು. ನಮ್ಮಲ್ಲಿ ಒಗ್ಗಟ್ಟು ಇಲ್ಲದ ಕಾರಣ ದಕ್ಷಿಣ ಭಾರತಕ್ಕೆ ಸಿಗಬೇಕಾದ ಬಹಳಷ್ಟು ಸೌಲಭ್ಯಗಳು ನಮಗೆ ಸಿಕ್ಕಿಲ್ಲ ಹಾಗಾಗಿ ನಾವು ಒಗ್ಗಟ್ಟಿನಿಂದ ಪ್ರಯತ್ನಪಟ್ಟರೆ ರಾಣಿ ಅಬ್ಬಕ್ಕನಂತಹ ಹಲವಾರು ವಿಷಯಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಸಿಗುವಂತೆ ಮಾಡಬಹುದಾಗಿದೆ ಎಂದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು, ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ ಅವರು ಈ ಉಪನ್ಯಾಸ ಕಾರ್ಯಕ್ರಮದ ಸಂಚಾಲಕರಾಗಿದ್ದರು. ಅ

ಪಡೆದುಕೊಂಡಿದೆ. ಹಾಗಾಗಿ ಬ್ರಿಟಿಷರಿಗಿಂತಲೂ ಮೊದಲೇ ನಮ್ಮ ದೇಶವನ್ನು ಆಕ್ರಮಿಸಿದ ಪೋರ್ಚುಗೀಸರ ವಿರುದ್ಧ ಹೋರಾಡಿದ ಅಬ್ಬಕ್ಕನನ್ನು ತಿಳಿಯಲೇ ಸಾಧ್ಯವಾಗಿಲ್ಲ. ಆದರೂ ರಾಣಿ ಅಬ್ಬಕ್ಕನ ಕುರಿತಾಗಿ ಇತಿಹಾಸಕಾರರು ಮರೆತಿದ್ದಾರೆ, ಅವಳಿಗೆ ಚರಿತ್ರೆಯಲ್ಲಿ ಸೂಕ್ತ ಸ್ಥಾನಮಾನಗಳು ಸಿಗಲಿಲ್ಲ ಎಂಬ ವಿಚಾರಗಳನ್ನು ಬದಿಗಿಟ್ಟು ಅಬ್ಬಕ್ಕನನ್ನು ಮೊದಲು ನಾವು ತಿಳಿದುಕೊಂಡು ಇತರರಿಗೂ ತಿಳಿಸುವ ಹಾಗೂ ಮುಖ್ಯವಾಗಿ ಶಾಲೆಗಳಲ್ಲಿ ಅಬ್ಬಕ್ಕನ ಕುರಿತಾಗಿ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವುದರ ಮೂಲಕ ಜನಮನಗಳಲ್ಲಿ ಅವಳಿಗೆ ಶಾಶ್ವತವಾದ ಸ್ಥಾನ ದೊರಕುವಂತೆ ಪ್ರಯತ್ನಿಸಬೇಕು ಎಂದರು.

ಬಳಿಕ ಅಬ್ಬಕ್ಕನ ಕುರಿತಾದ ಕನ್ನಡ ಕವಿತೆಯನ್ನು ಉಪನ್ಯಾಸಕಿ ಪ್ರೇಮಲತಾ ಅವರು ಹಾಗೂ ಸುಮಧುರವಾದ ಹಾಡನ್ನು ಶಿಕ್ಷಕಿ ಅಕ್ಕಮಹಾದೇವಿ ಅವರು ಪ್ರಸ್ತುತ ಪಡಿಸಿದರು. ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಗೌರವ ಕಾರ್ಯದರ್ಶಿ ಸಿ. ಎಂ. ನಾಗರಾಜ್ ಖಜಾಂಚಿ ಕೆ. ಜೆ. ಎಸ್. ಶೆಟ್ಟಿ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಹರಿ, ಎಸ್. ಡಿ. ಶ್ರೀನಿವಾಸ್ ಉಪಸ್ಥಿತರಿದ್ದರು. ದೆಹಲಿ ಶಿಕ್ಷಣ ಸಂಸ್ಥೆಯ ಪ್ರಭಾರ ಪ್ರಾಂಶುಪಾಲರಾದ ಎನ್. ವಿಜಯಕುಮಾರಿ ಅವರು ಸ್ವಾಗತಿಸಿದರು. ಶಿಕ್ಷಕಿ ಪರಿಮಳಾ ಅವರು ಕಾರ್ಯಕ್ರಮ ಹಾಗೂ ಅಬ್ಬಕ್ಕನ ಕುರಿತಾಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ ಪುಷ್ಪ ಯಾದವ್ ವಂದಿಸಿದರು. ಶಿಕ್ಷಕಿ ಬಿದಿಶಾ ಕಾಯರ್ಯಕ್ರಮ ನಿರೂಪಿಸಿದರು. ಅ




# ಅಬ್ಬಕ್ಕನ ಕುರಿತು ಇಂಗ್ಲಿಷ್ ಉಪನ್ಯಾಸ

ದೆಹಲಿ ಕರ್ನಾಟಕ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾಡಳಿತ ಮಾರ್ಚ್ 17ರಂದು ಜೆ.ಎನ್. ಯು.ವಿನಲ್ಲಿ ಆಯೋಜಿಸಿದ್ದ ರಾಣಿ ಅಬ್ಬಕ್ಕ ಉತ್ಸವದ ಪ್ರಯುಕ್ತ ಇಂಗ್ಲಿಷ್ ಭಾಷೆಯಲ್ಲಿ ಅಬ್ಬಕ್ಕ ರಾಣಿಯ ಕುರಿತಾಗಿ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಕು. ಟಿಂಟು ಮೋಳ್ ಉಪನ್ಯಾಸ ನೀಡಿದರು.

ದೆಹಲಿ ಕರ್ನಾಟಕ ಸಂಘದ ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಜೆ.ಎನ್.ಯು.ನ ಅಧ್ಯಯನ ಪೀಠದ ಶ್ರೀ ಕೃಷ್ಣಮೂರ್ತಿ ಅವರು ಉಪಸ್ಥಿತರಿದ್ದರು. ಕಾರ್ಯಕಾರಿ ಸಮಿತಿಯ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು. ಅ




**ಸಂಘದ ಸಾಂಸ್ಕೃತಿಕ ಹಾಗೂ ರಂಗ ಸಂಘಟನೆಯ**















ಲ್ಲಿ ತೊಡಗಿಸಿಕೊಂಡ ಮಹಿಳೆಯರಿಗೆ ಅಭಿನಂದನೆ









# ದೆಹಲಿಯ ಪ್ರಸಿದ್ಧ ಸ್ಥಳದಲ್ಲಿ ರಾಣಿ ಅಬ್ಬಕ್ಕನ ಪ್ರತಿಮೆಯ ಸ್ಥಾಪನೆ ಆಗಬೇಕು

## ಎ.ಎಸ್.ಜಯಚಂದ್ರ, ಜಿಲ್ಲಾ ಸತ್ರ ನ್ಯಾಯಾಧೀಶರು




ದೆಹಲಿ ಕರ್ನಾಟಕ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾಡಳಿತ ಸಂಯುಕ್ತವಾಗಿ ಆಚರಿಸಿದ ರಾಷ್ಟ್ರೀಯ ಅಬ್ಬಕ್ಕ ಉತ್ಸವದ ಆರನೇ ದಿನವಾದ ಮಾರ್ಚ್ 16ರಂದು ತೆಲುಗು ಭಾಷೆಯಲ್ಲಿ ರಾಣಿ ಅಬ್ಬಕ್ಕನ ಕುರಿತು ಶ್ರೀ ಎ.ಎಸ್.ಜಯಚಂದ್ರ ಉಪನ್ಯಾಸ ಮಾಡಿದರು.

ರಾಣಿ ಅಬ್ಬಕ್ಕನ ಇತಿಹಾಸವನ್ನು ವಿಷದೀಕರಿಸುತ್ತ ತೆಲುಗು ಮತ್ತು ತುಳು ಭಾಷೆಯ ಆಗಿನ ಕಾಲದ ಸಂಬಂಧದ ಬಗ್ಗೆ ಹೊಸ ಸುಳಿವೊಂದನ್ನು ನೀಡಿದರು. ಮಹಿಳೆಯರ ಅಗಿನ ಜೀವನ ಸ್ಥಿತಿಯ ಬಗ್ಗೆ ವಿವರಿಸುತ್ತ ಮಹಿಳಾ ದಿನಾಚರಣೆಯ ಈ ತಿಂಗಳಿನಲ್ಲೆ ರಾಣಿ ಅಬ್ಬಕ್ಕನ ಉತ್ಸವವನ್ನು ಆಚರಿಸುತ್ತಿರುವುದರ ಮಹತ್ವವನ್ನು ತಿಳಿಸಿದರು. ತುಳು ಹಾಗೂ ತೆಲುಗು ಸಂಪ್ರದಾಯದ ನಂಟನ್ನು ವಿವರಿಸಿ ಇಂದಿನ ಕಾಲದಲ್ಲಿ ತೆಲುಗು ಚಿತ್ರರಂಗದಲ್ಲಿ ಪ್ರಖ್ಯಾತರಾದ ಅನುಷ್ಕಾ ಶೆಟ್ಟಿ, ಶಿಲ್ಪಾ ಶೆಟ್ಟಿ, ಪ್ರಕಾಶ್ ರೈ, ಸುಮನ್ ಮುಂತಾದವರು ತುಳುವರು ಎಂದು ಹೇಳಿದರು. ಈ ಉತ್ಸವದ ಮೂಲಕ ದೆಹಲಿಯಲ್ಲಿರುವ ತೆಲುಗು ಭಾಷಿಕರಿಗೆ ತುಳು ನಾಡಿನ ರಾಣಿಯ ಪರಿಚಯ ಮಾಡಿಸಿದ್ದು ಉತ್ತಮ ಪ್ರಯತ್ನ. ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ಎಂದರೆ ನಮಗೆ ಮೊದಲು ನೆನಪಾಗುವುದು ಝಾನ್ಸಿ ರಾಣಿ ಲಕ್ಷ್ಮೀ ಬಾಯಿ ಮಾತ್ರ, ರಾಣಿ ಅಬ್ಬಕ್ಕನ ಬಗ್ಗೆ ಎಲ್ಲಿಯೂ ಕಂಡುಬರುವುದಿಲ್ಲ. ಆದ್ದರಿಂದ ಈ ಉತ್ಸವ ಮತ್ತಷ್ಟು ಸಾರ್ಥಕವಾಗಬೇಕೆಂದರೆ ದೆಹಲಿಯ ಯಾವುದಾದರೂ ಪ್ರಸಿದ್ಧ ಸ್ಥಳದಲ್ಲಿ ರಾಣಿ ಅಬ್ಬಕ್ಕನ ಪ್ರತಿಮೆ ಸ್ಥಾಪನೆ ಆಗಬೇಕೆಂದು ಈ ಸಂದರ್ಭದಲ್ಲಿ ಹೇಳಿದರು.

ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಖಜಾಂಚಿ ಶ್ರೀ ಕೆ.ಎಸ್.ಜಿ.ಶೆಟ್ಟಿ ಅವರು ವಂದನಾರ್ಪಣೆ ಮಾಡಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ.ನಾಗರಾಜ ಅವರು ಈ ಕಾರ್ಯಕ್ರಮದ ಸಂಚಾಲಕತ್ವವನ್ನು ವಹಿಸಿದ್ದರು. ಈ ಸಂದರ್ಭದಲ್ಲಿ ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಸಂಸ್ಥೆಯ ಸದಸ್ಯರಾದ ಡಾ.ಎಸ್. ಎಂ.ಕಂಠೀಕರ್ ಹಾಗೂ ಸ್ಥಳೀಯ ಅನೇಕ ತೆಲುಗು ಭಾಷಿಗರು ಉಪಸ್ಥಿತರಿದ್ದರು. ಅ



# ರಾಣಿ ಅಬ್ಬಕ್ಕನ ಅನ್ವೇಷಣೆ ಮಾಡಬೇಕು

## ರಾಣಿ ಅಬ್ಬಕ್ಕ ರಾಷ್ಟ್ರೀಯ ಉತ್ಸವದ ತಮಿಳು ವಿಚಾರಗೋಷ್ಠಿಯಲ್ಲಿ ಎಸ್. ಶ್ರೀನಿವಾಸನ್



ಖ್ಯಾತ ಬರಹಗಾರ ಶ್ರೀ ಎಸ್. ಶ್ರೀನಿವಾಸನ್ ಅವರು ತುಳುನಾಡಿನ ರಾಣಿ ಅಬ್ಬಕ್ಕ ದೇವಿಯ ಬಗ್ಗೆ ಮಾತನಾಡುತ್ತ ಅವರು ಹೋರಾಡಿದ ಸಂಗ್ರಾಮಗಳು ಅವರು ಎದುರಿಸಿದ ಪ್ರಶ್ನೆಗಳು, ಪೋರ್ಚುಗೀಸರ ವಸಾಹತುಶಾಹಿ ರಾಷ್ಟ್ರ ಸ್ಥಾಪನೆಯನ್ನು ಅದನ್ನು ಪ್ರಾರಂಭದಲ್ಲೇ ಮುರಿದುದು ಅಲ್ಲದೆ ಅವರು ಇಷ್ಟೆಲ್ಲಾ ಹೋರಾಟಗಳ ಮಧ್ಯೆ ಪ್ರಜಾ ಸಂರಕ್ಷಣೆ, ಮುಖ್ಯವಾಗಿ ಕೃಷಿ ಉತ್ಪಾದನೆ, ಹಡಗು ನಿರ್ಮಾಣ, ವಾಣಿಜ್ಯಗಳಿಗೂ ಪ್ರೋತ್ಸಾಹವಿತ್ತರು ಎಂಬುದು ಗಮನಾರ್ಹ. ಇವರು ಸ್ಥಾಪಿಸಿದ ಹಡಗು ಕಟ್ಟುವ ತಳವಾಡಗಳನ್ನು ಮಂಗಳೂರು ಬಂದರಿನಲ್ಲಿ ಆಮೇಲೆ ಬಂದ ಟಿಪು ಸುಲ್ತಾನ್ ಬಳಸಿ ಆಂಗ್ಲರನ್ನು ಎದುರಿಸಿದನೆಂಬುದು ಗಮನಾರ್ಹ. ದೆಹಲಿ ಕರ್ನಾಟಕ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾಡಳಿತ ಆಚರಿಸುತ್ತಿರುವ ರಾಷ್ಟ್ರೀಯ ಅಬ್ಬಕ್ಕ ಉತ್ಸವದ ಐದನೇ ದಿನವಾದ ಮಾರ್ಚ್ 15ರಂದು ಶ್ರೀ ಶ್ರೀನಿವಾಸ್ ಅವರು ಮಾತನಾಡುತ್ತಾ ಬರೇ ಅಬ್ಬಕ್ಕನ ಹೆಸರನ್ನು ರಸ್ತೆಗೆ ಇಡುವುದು ಅವರ ಅಂಚೆ ಚೀಟಿ ಹೊರ ತರುವುದು, ಶಿಲಾಸ್ಥಾಪನೆ ಮಾತ್ರ ಮಾಡದೆ, ಆಗಿನ ಕಾಲದಲ್ಲಿ ಕೃಷಿ ಉತ್ಪಾದನೆ ಆರ್ಥಿಕ ಪರಿಸ್ಥಿತಿ, ಹಡಗು ಉತ್ಪಾದನಾ ಕಾರ್ಯಗಳ ಬಗ್ಗೆಯೂ ಅಧ್ಯಯನ, ಅನ್ವೇಷಣೆ ಮಾಡಬೇಕು ಎಂದು ಅವರು ಅಭಿಪ್ರಾಯಪಟ್ಟರು. ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು ಮತ್ತು ಸಂಚಾಲಕತ್ವವನ್ನು ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಅ




## ರಾಣಿ ಅಬ್ಬಕ್ಕನ ಹೋರಾಟ ಭಾರತ ಸ್ವಾತಂತ್ರ್ಯದ ಅಸ್ತಿಭಾರ

### ಪ್ರೊ. ಎ. ವಿ. ನಾವಡ

ಬ್ರಿಟಿಷರ ವಿರುದ್ಧ ಹೋರಾಡಿದವರು ಮಾತ್ರ ಸ್ವಾತಂತ್ರ್ಯ ಹೋರಾಟಗಾರರು ಎಂಬ ತಪ್ಪು ಪರಿಕಲ್ಪನೆಯು ಬಹಳ ಕಾಲದಿಂದ ನಮ್ಮಲ್ಲಿ ಬೇರೂರಿದೆ. 16ನೇ ಶತಮಾನದ ಎರಡನೆಯ ಭಾಗದಲ್ಲಿ ಪೋರ್ಚುಗೀಸರ ವಿರುದ್ಧ ಹೋರಾಡಿದ ರಾಣಿ ಅಬ್ಬಕ್ಕನ ಹೋರಾಟ 'ಭಾರತ ಸ್ವಾತಂತ್ರ್ಯದ ಅಸ್ತಿಭಾರ' ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಎ. ವಿ. ನಾವಡ ಹೇಳಿದರು.

ಅವರು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ 'ರಾಷ್ಟ್ರೀಯ ಅಬ್ಬಕ್ಕ ಉತ್ಸವ'ದ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ ಅವರು ಪುರುಷ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸಿದ ಅಬ್ಬಕ್ಕನನ್ನು ಆಧುನಿಕ ಕಾಲದ ಸ್ತ್ರೀವಾದಿ ಎನ್ನಬಹುದು. ಅಬ್ಬಕ್ಕ ನಮ್ಮವಳು ಎನ್ನುವ ಭಾವನೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಅರಳಬೇಕು. ಜೊತೆಗೆ ಮುಂದಿನ ತಲೆಮಾರಿಗೆ ಅಬ್ಬಕ್ಕನನ್ನು ಪರಿಚಯಿಸುವ ಕಾರ್ಯಗಳಿಗೆ ನಾವೆಲ್ಲರೂ ಮುಂದಾಗಬೇಕು ಎಂದರು. ಹಾಗೆಯೇ ರಾಷ್ಟ್ರರಾಜಧಾನಿಯಲ್ಲಿ ದೆಹಲಿ ಕನಾಟಕ ಸಂಘವು ತಮಿಳರಿಗೆ, ಮರಾಠಿಗರಿಗೆ, ತೆಲುಗರಿಗೆ ಹಾಗೂ ಹಿಂದಿಯವರಿಗೆ ಅಬ್ಬಕ್ಕನನ್ನು ಪರಿಚಯಿಸಿದ ಕಾರ್ಯಕ್ಕೆ ಅಭಿನಂದನೆಯನ್ನು ಸಲ್ಲಿಸಿದರು.

'ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಬ್ಬಕ್ಕನ ಪಾತ್ರ'ದ ಕುರಿತಾಗಿ ಮಾತನಾಡಿದ ಬಂಟ್ವಾಳ ರಾಣಿ ಅಬ್ಬಕ್ಕ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ತುಕಾರಾಮ ಪೂಜಾರಿ ಅವರು ಅಮೇರಿಕ, ಯುರೋಪ್ ಇತಿಹಾಸ ಓದುವ ಮೊದಲು ನಮ್ಮ ಕಾಲಡಿಯ ಇತಿಹಾಸ ಮೊದಲು ತಿಳಿದುಕೊಳ್ಳಬೇಕು. ಸುಮಾರು 450 ವರ್ಷಗಳ ಹಿಂದೆಯೇ ನಮ್ಮ ಭಾರತವನ್ನು ಯುರೋಪಿನಲ್ಲಿ ಸುದ್ದಿ ಮಾಡಿಸಿದವಳು ಅಬ್ಬಕ್ಕ. ತುಳುನಾಡನ್ನು ಆಳಿದ 14 ರಾಜಮನೆತನಗಳಲ್ಲಿ 12 ರಾಜಮನೆತನಗಳು ಜೈನರದ್ದು. ಜೈನಧರ್ಮದ ಚೌಟ ಮನೆತನದ ತುಂಡರಸಿಯಾದ ಅಬ್ಬಕ್ಕ ಜಾಗತಿಕ ಮಟ್ಟದಲ್ಲಿ ಹೆಸರು ಪಡೆದ ಪೋರ್ಚುಗೀಸರನ್ನು ಎದುರಿಸಿದ್ದು ಸಾಮಾನ್ಯ ಸಂಗತಿಯಲ್ಲ. ವಿಜಯನಗರದ ಅರಸರು ಯಾವುದೋ ಒಂದು ಕಾರಣಕ್ಕಾಗಿ ಬೆಂಬಲಿಸಿದ್ದರಿಂದ ಪೋರ್ಚುಗೀಸರು ಗೋವೆಯನ್ನು ವಶಪಡಿಸಲು ಸಾಧ್ಯವಾಯಿತು. ಬಳಿಕ ತುಳುನಾಡಿಗೆ ಕಾಲಿಟ್ಟಾಗ ಎಲ್ಲರೂ ತಮ್ಮ ಉಳಿವಿಗಾಗಿ ಪೋರ್ಚುಗೀಸರ ಒಡೆತನವನ್ನು ಒಪ್ಪಿಕೊಂಡರೂ ಸಣ್ಣ ಪ್ರಾಂತ್ಯದ, ಪ್ರಜೆಗಳಿಗಾಗಿ ಬದುಕುತ್ತಿದ್ದ ರಾಣಿ ಅಬ್ಬಕ್ಕ ಮಾತ್ರ ಒಪದೇ ಯುದ್ಧ ಸಾರಿ ಹೋರಾಟ ನಡೆಸಿದ ರೀತಿ ಮಹತ್ತರವಾದುದು. ಪ್ರಸ್ತುತ ಇಂದಿನ ನಮ್ಮ ರಾಜಕೀಯ, ನ್ಯಾಯಾಂಗ ವ್ಯವಸ್ಥೆಗೆ ರಾಣಿ ಅಬ್ಬಕ್ಕನ ಸರಳ ಜೀವನ, ಆದರ್ಶ ಆಡಳಿತ ಆದರ್ಶವಾಗಬೇಕು ಅದಕ್ಕಾಗಿ ನಾವೆಲ್ಲರೂ ಅಬ್ಬಕ್ಕನನ್ನು ಸ್ಮರಿಸುವ ಅಗತ್ಯವಿದೆ ಎಂದರು.

'ರಾಣಿ ಅಬ್ಬಕ್ಕ : ಇತಿಹಾಸದಿಂದ ವರ್ತಮಾನಕ್ಕೆ' ಎಂಬ ವಿಚಾರದ ಕುರಿತಾಗಿ ಮಾತನಾಡಿದ ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಪ್ರೊ. ಭಾಸ್ಕರ ರೈ ಕುಕ್ಕುವಳ್ಳಿ ಅವರು ಸ್ವಾತಂತ್ರ್ಯದ ಬಯಕೆಯಿಂದ ಹೋರಾಡಿದ, ಸ್ವಾತಂತ್ರ್ಯ ಹೋರಾಟದ ಪರಂಪರೆಯನ್ನು ಆರಂಭಿಸಿದ ಅಬ್ಬಕ್ಕ ನಮ್ಮ ರಾಷ್ಟದ ಸೊತ್ತು. ಆದರೆ ಐತಿಹಾಸಿಕ ದಾಖಲೆಗಳನ್ನು ಸರಿಯಾಗಿ ಬಳಕೆ ಮಾಡದ ಕಾರಣ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ನೆನಪಿಸಿಕೊಳ್ಳಬೇಕಾದ ಕೆಲವು ಹೆಸರುಗಳಲ್ಲಿ ಅಬ್ಬಕ್ಕನ ಹೆಸರು ಅಳಿಸಿ ಹೋಗಿರುವುದು ಹಾಗೂ ಅವಳನ್ನು ಕೇವಲ ತುಳುನಾಡಿಗೆ ಸೀಮಿತಗೊಳಿಸಿರುವುದು ದುರ್ದೈವ. ಗೋವೆಯನ್ನು ಬಿಟ್ಟು ಭಾರತದ ಯಾವ ಪ್ರದೇಶವನ್ನು ಆಕ್ರಮಿಸದ ಹಾಗೆ ನೋಡಿಕೊಂಡವಳು ಅಬ್ಬಕ್ಕ. ಹಾಗೆಯೇ ವ್ಯವಸ್ಥೆಯನ್ನು ಧಿಕ್ಕರಿಸಿ ಸಮಾಜವನ್ನು ಉದ್ಧರಿಸಿದವಳು ಅಬ್ಬಕ್ಕ. ಇಂತಹ ಅಬ್ಬಕ್ಕ ಒಂದು ಪ್ರಜ್ಞೆ ಆಗಬೇಕು, ಸ್ವಾಭಿಮಾನದ ಸಂಕೇತವಾಗಬೇಕು ಎಂದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಪೂಜಾ ಪಿ. ರಾವ್ ಕಾರ್ಯಕ್ರಮ ನಿರೂಪಿಸಿ, ಉಳ್ಳಾಲ ಅಬ್ಬಕ್ಕ ಸಮಿತಿಯ ಸಾಂಸ್ಕೃತಿಕ ಸಂಚಾಲಕ ತೋನ್ಸೆ ಪುಷ್ಕಳ ಕುಮಾರ್ ವಂದಿಸಿದರು. ಅ

*ಅರವಿಂದ ಬಿಜೈ*

## ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅಬ್ಬಕ್ಕನ ಕುರಿತಾಗಿ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವುದರ ಮೂಲಕ ಜನಮನಗಳಲ್ಲಿ ಅವಳಿಗೆ ಶಾಶ್ವತವಾದ ಸ್ಥಾನ ದೊರಕುವಂತೆ ಪ್ರಯತ್ನಿಸಬೇಕು

### ಅರವಿಂದ ಬಿಜೈ

ಹದಿನಾರನೇ ಶತಮಾನದ ಉತ್ತರಾರ್ಧದಲ್ಲಿ ತುಳುನಾಡನ್ನು ಕೈವಶ ಮಾಡಿಕೊಳ್ಳಲು ಬಂದ ಪರಂಗಿಗಳಿಗೆ ಸಿಂಹಸ್ವಪ್ನವಾದವಳು ತುಳುನಾಡಿನ ರಾಣಿ ಅಬ್ಬಕ್ಕ. ಕೇವಲ ತುಂಡರಸಿಯಾಗಿದ್ದರೂ ಪರಂಗಿಗಳನ್ನು ಸದೆಬಡಿದ ಸುದ್ದಿ ಹಾಗೂ ಆಕೆಯ ಹೆಸರು ಯುರೋಪಿನಲ್ಲಿಯೂ ಸದ್ದು ಮಾಡಿರುವುದು ಅವಳ ಧೀರತನಕ್ಕೆ ಸಾಕ್ಷಿ. ಅದಲ್ಲದೆ ಆ ಕಾಲದಲ್ಲಿ ಸಾಂಬಾರ ಪದಾರ್ಥಗಳ ವ್ಯಾಪಾರವು ಗ್ರೀಸ್, ಆಫ್ರಿಕಾ ಹಾಗೂ ಅರಬ್ ರಾಷ್ಟ್ರಗಳವರೆಗೆ ವಿಸ್ತಾರವಾಗಿತ್ತು. ಪರಕೀಯರ ವಿರುದ್ಧ ಮಾತ್ರವಲ್ಲ, ಅಂದಿನ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಬಂಡಾಯವೆದ್ದ ಅಬ್ಬಕ್ಕನನ್ನು ಓರ್ವ ಸ್ತ್ರೀವಾದಿ ಎನ್ನಬಹುದು. ಅಧಿಕಾರದ ಲಾಲಸೆಗೆ ಒಳಗಾಗದೆ, ತಾಯ್ನಾಡಿಗಾಗಿ ಹಾಗೂ ಸ್ವಾಭಿಮಾನಕ್ಕಾಗಿ ಬ್ರಿಟಿಷರಿಗಿಂತಲೂ ಮೊದಲೇ ನಮ್ಮ ದೇಶವನ್ನು ಆಕ್ರಮಿಸಿದ ಪೋರ್ಚುಗೀಸರ ವಿರುದ್ಧ ಹೋರಾಡಿದ ಅಬ್ಬಕ್ಕನ ಕುರಿತಾಗಿ ಇತಿಹಾಸಕಾರರು ಮರೆತಿರುವುದು ದುರ್ದೈವ. ಅವರ ಜೊತೆ ನಾವೆಲ್ಲರೂ ಕೂಡ ಮರೆತಿರುವುದರಿಂದಲೇ ಅವಳಿಗೆ ಚರಿತ್ರೆಯಲ್ಲಿ ಸೂಕ್ತ ಸ್ಥಾನಮಾನಗಳು ಸಿಗಲಿಲ್ಲ ಎನ್ನಬಹುದು. ರಾಣಿ ಅಬ್ಬಕ್ಕನ ಕುರಿತಾಗಿ ಕನ್ನಡದ ಖ್ಯಾತ ಸಾಹಿತಿ ವೈದೇಹಿ ಅವರು "ಒಂದು ವೇಳೆ ಅಬ್ಬಕ್ಕ ಬೇರೆ ಎಲ್ಲಿಯಾದರೂ ಹುಟ್ಟಿದ್ದರೆ ಅವಳ ಹೆಸರಲ್ಲಿ ಅದೆಷ್ಟೋ



ಲಾವಣಿಗಳು ಹುಟ್ಟಿಕೊಳ್ಳುತ್ತಿದ್ದವು ಮತ್ತು ಅವಳು ಯಾವತ್ತೋ ಚರಿತ್ರೆಯ ಪುಟವನ್ನು ಸೇರುತ್ತಿದ್ದಳು" ಎಂದು ಹೇಳುತ್ತಾರೆ. ಹಾಗಾಗಿ ಅಬ್ಬಕ್ಕನನ್ನು ಮೊದಲು ನಾವು ತಿಳಿದುಕೊಂಡು ಇತರರಿಗೂ ತಿಳಿಸುವ ಮುಖ್ಯವಾಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅಬ್ಬಕ್ಕನ ಕುರಿತಾಗಿ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವುದರ ಮೂಲಕ ಜನಮನಗಳಲ್ಲಿ ಅವಳಿಗೆ ಶಾಶ್ವತವಾದ ಸ್ಥಾನ ದೊರಕುವಂತೆ ಪ್ರಯತ್ನಿಸಬೇಕು. ಅ

# ಇಂಡಿಯಾಗೇಟಿನಲ್ಲಿ ಕರ್ನಾಟಕದ ಹುಲಿಗಳು



ದೆಹಲಿ ಕರ್ನಾಟಕ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾಡಳಿತ ಸಹಯೋಗದೊಂದಿಗೆ ಎಂಟು ದಿನಗಳ ಕಾಲ ಆಚರಿಸುತ್ತಿರುವ ತುಳನಾಡ ವೀರರಾಣಿ ಅಬ್ಬಕ್ಕ ರಾಷ್ಟ್ರೀಯ ಉತ್ಸವದ ಸಮಾರೋಪ ಸಮಾರಂಭವು ಮಾರ್ಚ್ ತಿಂಗಳ 18ರಂದು ಬೆಳಗ್ಗಿನ ಜಾವ ಉಡುಪಿಯ ಬನ್ನಂಜೆ ಮಹಿಳಾ ಕಲಾ ಬಳಗದ  ಕಲಾವಿದರ ತಂಡದೊಂದಿಗೆ ರಾಜಧಾನಿ ದೆಹಲಿಯಲ್ಲಿ ಪ್ರಸಿದ್ಧಿ ಪಡೆದ ಇಂಡಿಯಾಗೇಟಿನಲ್ಲಿ ಅಮರ ಜವಾನ ಜ್ಯೋತಿಗೆ ನಮನ ಸಲ್ಲಿಸುವುದರ ಮೂಲಕ ಆರಂಭವಾಯಿತು.

ಇಂಡಿಯಾ ಗೇಟಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದ ಶ್ರೀ ಡಿ. ಸುರೇಂದ್ರ ಕುಮಾರ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವೀರರಾಣಿ ಅಬ್ಬಕ್ಕ ಅವರು ಭಾರತದ ಪ್ರಥಮ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ ಅವರು ದೇಶಕ್ಕಾಗಿ ತಮ್ಮ ಪ್ರಾಣ ತ್ಯಾಗ ಮಾಡಿದ್ದರು. ಹಾಗೂ ರಾಣಿ ಅಬ್ಬಕ್ಕನಿಗೆ ಮತ್ತು ದೇಶಕ್ಕಾಗಿ ಹೋರಾಡಿದ ಸೈನಿಕರಿಗೆ ಇಂಡಿಯಾ ಗೇಟಿನಲ್ಲಿ ಎರಡು ನಿಮಿಷಗಳ ಮೌನವನ್ನು ಆಚರಿಸಿ, ಕರ್ನಾಟಕದ ಹೆಮ್ಮೆಯ ತುಳುನಾಡಿನ ಜಾನಪದ ಕುಣಿತ ಹುಲಿವೇಷದೊಂದಿಗೆ ಗೌರವ ಸಲ್ಲಿಸುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು, ರಾಜ್ಯದ ಮತ್ತು ದೆಹಲಿಯ ನೂರಾರು ಕನ್ನಡಿಗರು ಭಾಗವಹಿಸಿದ್ದರು. ಅ







ತುಳುನಾಡ ವೀರರಾಣಿ ಅಬ್ಬಕ್ಕ ರಾಷ್ಟ್ರೀಯ ಉತ್ಸವದಲ್ಲಿ ವಿದ್ವಾಂಸರ ಸನ್ಮಾನ

















# ದೆಹಲಿಯಲ್ಲಿ ವೀರರಾಣಿ ಅಬ್ಬಕ್ಕ ರಾಷ್ಟ್ರೀಯ ಉತ್ಸವದಲ್ಲಿ

# ಅಕವಿತೆ ಕವನ ಸಂಕಲನ ಬಿಡುಗಡೆ




ದೆಹಲಿ ಕರ್ನಾಟಕ ಸಂಘವು ಪ್ರಕಟಿಸಿದ ದೆಹಲಿಯ ಹಿರಿಯ ಕನ್ನಡತಿ, ಬರಹಗಾರ್ತಿ ಡಾ. ಅಹಲ್ಯಾಚಿಂತಾಮಣಿ ಅವರ ಕವನ ಸಂಕಲನ 'ಅಕವಿತೆ'ಯನ್ನು ಉಳ್ಳಾಲ ನಗರಸಭೆಯ ಆಯುಕ್ತರಾದ ಶ್ರೀಮತಿ ವಾಣಿ ಆಳ್ವ ಅವರು ಸಂಘದ ಸಭಾಂಗಣದಲ್ಲಿ ಮಾರ್ಚ್ 18ರಂದು ಬಿಡುಗಡೆಗೊಳಿಸಿದರು. ವಾಣಿ ಆಳ್ವ ಮಾತನಾಡುತ್ತ ಡಾ. ಅಹಲ್ಯಾಚಿಂತಾಮಣಿಯವರ 'ಅಮ್ಮನ ಅಕ್ಷರಮಾಲೆ' ಕವನವನ್ನು ಓದಿ ಅಮ್ಮನ ಬಗ್ಗೆ ಒಬ್ಬ ಮಹಿಳೆಗೆ ಅಥವಾ ಒಬ್ಬಳು ಮಗಳಿಗೆ ಇರಬೇಕಾದಂತಹ ಎಲ್ಲಾ ಭಾವನೆಗಳು ಅದರಲ್ಲಿ ವ್ಯಕ್ತವಾಗಿದೆ ಎಂದರು. ಅಹಲ್ಯಾಚಿಂತಾಮಣಿಯವರಿಗೆ ಇನ್ನಷ್ಟು ಬರೆಯುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಶುಭ ಹಾರೈಸಿದರು.

ಬರಹಗಾರ, ಸಂಘದ ಮಾಜಿ ಕೋಶಾಧ್ಯಕ್ಷ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಮಾತನಾಡುತ್ತ ಕವಿತೆ ಒಂದು ಅಂತರಂಗದ ಅಭಿವ್ಯಕ್ತಿ ಅಷ್ಟೆ. ಅದು ಹೀಗೆ ಇರಬೇಕು ಹಾಗೇ ಇರಬೇಕು ಎಂದು ಏನಿಲ್ಲ, ಅದು ಸಹೃದಯದಿಂದ ಬರುವಂತಹ ಒಂದು ಸ್ಪಂದನೆ ಪ್ರಕಟಗೊಳ್ಳುವುದು ಕವಿತೆಯಿಂದ ಎಂದರು. ಡಾ. ಅಹಲ್ಯಾಚಿಂತಾಮಣಿಯವರು ದೆಹಲಿ ಕನ್ನಡಿಗರಿಗೆಲ್ಲ ಅವರು 'ಅಬ್ಬಕ್ಕ' ಇದ್ದಹಾಗೆ; ಅಬ್ಬಕ್ಕ ಉತ್ಸವದಲ್ಲಿ ಅವರ ಕೃತಿ ಬಿಡುಗಡೆಯಾಗಿರುವುದು ತುಂಬಾ ಅರ್ಥಪೂರ್ಣ ಎಂದರು.

ಡಾ. ಅಹಲ್ಯಾ ಚಿಂತಾಮಣಿ ಅವರು ಮಾತನಾಡುತ್ತ ನಾನು ಬರೆದಿರುವ ಈ ಪುಟಗಳಲ್ಲಿರುವ ಸಾಲುಗಳನ್ನು ಯಾರಾದರೂ ಓದಿದರೆ ಅದನ್ನು "ಕವಿತೆ"ಯೆಂದು ಕರೆಯಲಾರರು. ಅವುಗಳು ಕವಿತೆಗಳಲ್ಲ. ತೋಚಿದ್ದನ್ನು ಗೀಚಿರುವ 'ಅಕವಿತೆಗಳು'. 12ನೇ ವಯಸ್ಸಿನಿಂದ ಅಂಚೆಕಾರ್ಡಿನಲ್ಲಿ ಯುಗಾದಿಯ ಶುಭಾಶಯಗಳನ್ನು ಬರೆದು ಐದು ಜನಕ್ಕೆ ಕಳುಹಿಸುತ್ತಿದ್ದೆ. ವರ್ಷಕ್ಕೊಂದು ಸಾರಿ ನನ್ನ ಪೂಜ್ಯ ತಂದೆಯವರು ನನಗೆ ಐದು ಅಂಚೆಕಾರ್ಡುಗಳನ್ನು ತಂದು ಕೊಡುತ್ತಿದ್ದರು. ನನ್ನ ಇಬ್ಬರು ಅಜ್ಜಿಯರಿಗೆ, ದೊಡ್ಡಪ್ಪನಿಗೆ, ಸೋದರ ಮಾವಂದಿರಿಗೆ ಕ್ಷೇಮ ಸಮಾಚಾರ ವಿಚಾರಿಸುವ ರೂಪದಲ್ಲಿ ಶುಭಾಶಯ ಕಳುಹಿಸುತ್ತಿದ್ದೆ. ನನಗೆ ಜನವರಿ 1958ಕ್ಕೆ ಮದುವೆ ನಿಶ್ಚಯವಾಯಿತು. ಆಗ ಬನಾರಸ್ ವಾಸಿಗಳಾಗಿದ್ದ ನನ್ನ ಭಾವೀ ಅತ್ತೆ ಮಾವಂದಿರಿಗೆ ಒಂದು ಅಂತರ್‌ದೇಶಿಯ ಲಕೋಟೆಯಲ್ಲಿ ಯುಗಾದಿಯ ಶುಭಾಶಯ ಕಳುಹಿಸಿದ್ದೆ. ಆಗ ನನ್ನ ಭಾವೀ ಮಾವನವರು 'ಪದ್ಯರೂಪದ ಶುಭಾಶಯ ಚೆನ್ನಾಗಿದೆ–ನನ್ನ ಭಾವೀ ಪತಿ ಬಿ.ಎಚ್.ಯು. ನಲ್ಲಿ ಹಿಂದೀ ಸಾಹಿತ್ಯದಲ್ಲಿ ಎಂ.ಎ. ಮಾಡುತ್ತಿದ್ದಾನೆ. ನೀನು ಮದುವೆಯಾಗಿ ಬಂದ ಮೇಲೆ ಹಿಂದಿ ಕಲಿತು ಕನ್ನಡದಲ್ಲಿ ಕವಿತೆ ಬರೆದು ಅವನಿಗೆ ಹೇಳು– ಅವನಿಗೆ ಕನ್ನಡ ಮಾತಾಡಲು ಬರುತ್ತೆ, ಓದಿ–ಬರೆಯಲು ಬರುವುದಿಲ್ಲ ಎಂದು ಉತ್ತರ ಬರೆದರು. ಮದುವೆಯಾದ ನಂತರ ನನ್ನ ಪತಿ ಬಿ.ಎಚ್.ಯು.ನಲ್ಲಿ ಪಂಡಿತ ಹಜಾರಿ ಪ್ರಸಾದರ ನಿರ್ದೇಶನದಲ್ಲಿ ಹಿಂದಿ ಸಾಹಿತ್ಯದ ಮೇಲೆ ಪಿ.ಎಚ್.ಡಿ. ಮಾಡಿದರು. ಆಗಿನ ದಿನಗಳಲ್ಲಿ ನಾನು ನನ್ನನ್ನು ಬಹಳ ಜಾಣೆ ಎಂದುಕೊಂಡು ಜಂಭದಿಂದ ನಾಲ್ಕು ಪಂಕ್ತಿಯಲ್ಲಿ ಒಂದು ಕವನವನ್ನು ಹಿಂದಿಯಲ್ಲಿ ಬರೆದು ಪಂಡಿತ ಹಜಾರಿ ಪ್ರಸಾದರಿಗೆ ಕೊಟ್ಟೆ. ಅವರು ನನ್ನನ್ನು ಮೇಲಿನಿಂದ ಕೆಳಗಿನವರೆಗೂ ಕರುಣೆಯಿಂದ ನೋಡಿ 'ನೀನು ನಿನ್ನ ಭಾಷೆಯಲ್ಲಿ (ಕನ್ನಡದಲ್ಲಿ) ಬರಿ, ಇದು ಕವಿತೆ ಎನ್ನುವುದಕ್ಕಿಂತ 'ಅಕವಿತೆ' ಎನ್ನಬಹುದು ಎಂದು ಜೋರಾಗಿ ಗಹಗಹಿಸಿ ನಕ್ಕುಬಿಟ್ಟರು. ಆಗ ನನಗೆ 19 ವರುಗಳು. ನನಗಾದ ಭಯ, ನಾಚಿಕೆ ಸಂಕೋಚ, ಹೀನಾಯ (ನನ್ನ ಬಗ್ಗೆ) ಒಟ್ಟಿಗೆ ಸೇರಿ ಅಳು ಬಂದು ಬಿಟ್ಟಿತು. ಆದರೆ ಅವರ ಪ್ರೀತಿ–ನನ್ನ ಕೊನೆಯ ದಿನದವರೆಗೂ 'ಬಹೂ ಮೂಂಗ್ ಔರ್ ಲೌಕೀಕ ದಾಲ್ ಔರ್ ನರಮ್ ಬಾತ್ ಖಿಲಾವ್' ಎಂದು ಕೇಳಿ ಡೆಲ್ಲಿಗೆ ಬಂದಾಗಲೆಲ್ಲಾ ನಮ್ಮ ಮನೇಲಿ ಊಟ ಮಾಡುತ್ತಿದ್ದರು. ಅದನ್ನು ನಾನು ಎಂದೂ ಮರೆಯಲಾರೆ.

ಅಂದಿನಿಂದ ಇಂದಿನವರೆಗೆ ಯುಗಾದಿ ಶುಭಾಶಯಗಳನ್ನು ನಾನು ಅಂಚೆಕಾರ್ಡಿನಲ್ಲೇ ಬರೆದು ಪ್ರಿಯ ಜನರಿಗೆ ಕಳುಹಿಸುತ್ತೇನೆ. ನನ್ನ ತಾಯಿ, ತಂದೆ, ಬಳಗ, ನನ್ನ ಅತ್ತೆ ಮಾವಂದಿರು ನನ್ನನ್ನು ಬಹಳ ಮೆಚ್ಚಿಕೊಂಡು ನನ್ನ ಭಾವನೆಗಳ ಬರವಣಿಗೆಗಳನ್ನು ಪ್ರೋತ್ಸಾಹಿಸಿದ್ದರು. ಅಂದಿನ 'ಅಕವಿತೆ'ಗಳು ಇಂದು ಒಂದು ಸಂಕಲನದ ರೂಪಗೊಂಡಿದೆ ಎಂದರೆ, ಇದು ಒಂದು ಚಮತ್ಕಾರ, ವಿಸ್ಮಯ! ನನಗೆ ಸ್ವತಃ 'ಇಲ್ಲದ' ಶಕ್ತಿಯನ್ನು ತುಂಬಿ ಕೈ ಬರಹದ 'ಅಕವಿತೆ'ಗಳಿವು.

ನಾನು ಈ ಪ್ರತಿಷ್ಠಿತ ಸಂಘಕ್ಕೆ 1972ನೇ ಇಸವಿಯಿಂದ ತವರುಮನೆ ಎಂದು ಹೆಜ್ಜೆ ಇಡುತ್ತಿದ್ದೇನೆ. ಡಾ. ಸರೋಜಿನಿ ಮಹಿಷಿಯಂತಹ ವಿದ್ವಾಂಸರ ಸ್ನೇಹವಾಗಿ ಅಧ್ಯಕ್ಷೆ ಮಹಿಷಿಯವರು ನನ್ನನ್ನು ಸಂಘಕ್ಕೆ ಆಕಾಲದಲ್ಲಿ ಸೀಮಿತವಾಗಿ ಕಾರ್ಯಕ್ರಮ ನಡೆಸಿ ನನ್ನನ್ನು ತೀರ್ಪುಗಾರರಾಗಿ ಕರೆಯುತ್ತಿದ್ದರು.

ಅಕವಿತೆ ಕವನ ಸಂಕಲನಕ್ಕೆ ಮುಖಪುಟ ವಿನ್ಯಾಸ ಮಾಡಿದ ಶ್ರೀ ಚೆನ್ನು ಎಸ್. ಮಠದ ಅವರ ಕಲಾ ಚಾತುರ್ಯವನ್ನು ಮೆಚ್ಚಿ ಹೊಗಳಿದರು. ಅ

***ಅಭಿಮತ ವರದಿ***



# ಡಾ. ಭೀಮ ಭಟ್ ಅವರಿಂದ ವೈಯಕ್ತಿಕ ಶಾರೀರಿಕ ಮತ್ತು ಮಾನಸಿಕ ಪ್ರಕೃತಿಯ ಕುರಿತು ಉಪನ್ಯಾಸ

ದೆಹಲಿ ಕರ್ನಾಟಕ ಸಂಘದಲ್ಲಿ ಕಳೆದ ತಿಂಗಳು ಅಂತರರಾಷ್ಟ್ರೀಯ ಖ್ಯಾತಿಯ ಆಯುರ್ವೇದ ವೈದ್ಯರಾದ ಡಾ. ಭೀಮ ಭಟ್ ಅವರಿಂದ ಪ್ರಾರಂಭಗೊಂಡಿರುವ ಆಯುರ್ವೇದದಿಂದ ಆರೋಗ್ಯ ಉಪನ್ಯಾಸ ಮಾಲಿಕೆಯಡಿಯಲ್ಲಿ ಮಾರ್ಚ್ 25ರಂದು 'ವೈಯಕ್ತಿಕ ಶಾರೀರಿಕ ಮತ್ತು ಮಾನಸಿಕ ಪ್ರಕೃತಿಯ' ಕುರಿತು ಪ್ರಾಥಮಿಕ ತಿಳುವಳಿಕೆಯನ್ನು ಮೂಡಿಸಿದರು. ಕಳೆದ ತಿಂಗಳಿಗಿಂತಲೂ ಹೆಚ್ಚಿನ ಸದಸ್ಯರು ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಅದರ ಪ್ರಯೋಜನವನ್ನು ಪಡೆದುಕೊಂಡರು.

ಆಯುರ್ವೇದದ ದೇವತೆ ಧನ್ವಂತರಿಯನ್ನು ಸ್ಮರಿಸಿ ಉಪನ್ಯಾಸವನ್ನು ಆರಂಭಿಸಿದ ಡಾ. ಭೀಮಭಟ್ಟರು ನಮ್ಮ ಜೀವನದಲ್ಲಿ ಆರೋಗ್ಯ ಬಹಳ ಪ್ರಮುಖವಾಗಿದ್ದು ಅದಕ್ಕಿಂತ ಮಿಗಿಲಾದ ಯಾವ ಭಾಗ್ಯವೂ ಇಲ್ಲ. ಆಯುರ್ವೇದ ಅನ್ನುವುದು ಬಹಳ ಪುರಾತನವಾದ ವೈದ್ಯಕೀಯ ಶಾಸ್ತ್ರ. ಆಯುರ್ವೇದದ ಅರ್ಥ 'ಆಯು' ಅಂದರೆ ಜೀವನ, 'ವೇದ' ಅನ್ನುವುದು ಶಾಸ್ತ್ರ ಎಂದು ಇದ್ದು ಜೀವನ ಶಾಸ್ತ್ರ ವಿಧಾನ ಇದಾಗಿದೆ. ನಮ್ಮಲ್ಲಿರುವ ನಾಲ್ಕು ವೇದಗಳಿಗೆ ಸಮಾನವಾದಂತಹ ವೇದ ಆಯುರ್ವೇದ. ಆಯುರ್ವೇದ ಅನ್ನೋದು ಅಥರ್ವ ವೇದದ ಉಪವೇದ.

ಆಯುರ್ವೇದದಲ್ಲಿ ಯಾವ ಯಾವ ಋತುಗಳಲ್ಲಿ ಯಾವ ರೀತಿಯ ಆಹಾರ ಸೇವಿಸಬೇಕು. ನಾವು ವಸಂತ ಋತುವಲ್ಲಿ ನಾವು ಏನು ಊಟ ಮಾಡಬೇಕು? ಯಾವ ಋತುಗಳಲ್ಲಿ ಯಾವ ಯಾವ ತರಕಾರಿ ಬೆಳೆಯುತ್ತದೆ ಅದನ್ನು ತಿಂದರೆ ಒಳ್ಳೆಯದು. ಕೃತಕವಾಗಿ ಬೆಳೆದದ್ದನ್ನು ತಿಂದರೆ ಆರೋಗ್ಯಕ್ಕೆ ತೊಂದರೆಯಾಗುತ್ತದೆ. ಅಲ್ಲದೆ ಅನಾರೋಗ್ಯ ಆದಾಗ ಡಾಕ್ಟರ್ ಬಳಿ ಹೋಗಬಾರದು, ಅದಕ್ಕೆ ಬದಲಾಗಿ ಅನಾರೋಗ್ಯವೇ ಆಗದ ಹಾಗೆ ನಾವು ಹೇಗೆ ಆಹಾರ ವಿಧಾನಗಳನ್ನು ಜೀವನವಿಧಾನವನ್ನಾಗಿ ಮಾಡಿಕೊಳ್ಳಬೇಕು ಎಂಬ ಬಗ್ಗೆ ಆಯುರ್ವೇದಲ್ಲಿ ತಿಳಿಸಲಾಗಿದೆ. ರೋಗ ಬಾರದ ಹಾಗೆ ಯೋಗ ಮಾಡಬೇಕು, ಆಯುರ್ವೇದದಲ್ಲಿ ಮನುಷ್ಯನ ಪ್ರಕೃತಿಗೆ ಬಹಳ ಮಹತ್ವ ನೀಡಲಾಗಿದೆ. ಇಡೀ ಸೃಷ್ಟಿಯಲ್ಲಿ ಪಂಚ ಮಹಾಭೂತ ಅತ್ಯಂತ ಮುಖ್ಯವಾದುದು. ಆಯುರ್ವೇದ ಕೂಡ ಮೂಲತಃ ಪಂಚಮಹಾಭೂತಗಳನ್ನು ಅನುಸರಿಸಿಯೇ ನಡೆಯುತ್ತದೆ. ಪಂಚಮಹಾಭೂತ ಆಕಾಶ, ವಾಯು, ಅಗ್ನಿ, ಆಪ್ (ಜಲ) ಮತ್ತು ಭೂಮಿ. ನಮ್ಮ ಕೈಯಲ್ಲಿ ಐದು ಬೆರಳುಗಳಿವೆ ಇವು ಕೂಡ ಪಂಚಮಹಾಭೂತವನ್ನು ಪ್ರತಿನಿಧಿಸುತ್ತವೆ. ಅತಿಯಾದ ತೂಕ ಇದ್ದವರಿಗೆ ಪೃಥ್ವಿ ಮಹಾಭೂತ ಮತ್ತು ಅಪ್‌ಮಹಾಭೂತ ಜಾಸ್ತಿ ಇದೆ. ಇನ್ನೂ ಅತಿ ಹೆಚ್ಚು ತೂಕ ಇದ್ದವರಿಗೆ ಪೃಥ್ವಿ ಮಹಾಭೂತ ಜಾಸ್ತಿ ಇರುತ್ತದೆ. ಕೆಲವರು 30ವರ್ಷ ವಯಸ್ಸಿನವರಾಗಿದ್ದರೂ ತೂಕ 40 ಕೆ.ಜಿ. ಇದ್ದರೆ ಅವರಲ್ಲಿ ಆಕಾಶ ಮತ್ತು ವಾಯು ಮಹಾಭೂತ ಜಾಸ್ತಿ ಇದೆ ಎಂದು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ವಾತ ಪ್ರಕೃತಿ (ದೋಷ), ಪಿತ್ತ ದೋಷ ಮತ್ತು ಕಫ ದೋಷ ಎಂದು ಮೂರು ದೋಷಗಳು ನಮ್ಮ ದೇಹದಲ್ಲಿ ಉತ್ಪತ್ತಿಯಾಗುತ್ತವೆ. ವಾತ ದೋಷ ಎಂದರೆ ಆಕಾಶ ಮತ್ತು ವಾಯು ಸೇರಿಕೊಂಡು ನಮ್ಮ ದೇಹದಲ್ಲಿ ಆಗುವಂತಹದ್ದು.

ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಮೊದಲಿಗೆ ಎಲ್ಲರನ್ನು ಸ್ವಾಗತಿಸಿದರು. ಅಭಿಮತ ಸಂಪಾದಕ ಮಂಡಳಿಯ ಸದಸ್ಯರಾದ ಶ್ರೀ ಎನ್.ಪಿ. ಚಂದ್ರಶೇಖರ ಅವರು ಧನ್ಯವಾದ ಸಲ್ಲಿಸಿದರು. ಅ

***ಅಭಿಮತ ವರದಿ***

## ಜನಕಪುರಿ ಮಹಿಳಾ ಮಂಡಳಿಯ ನೂತನ ಅಧ್ಯಕ್ಷರಾಗಿ ಮೋಹಿನಿ ರೈ



ಜನಕಪುರಿ ಮಹಿಳಾ ಮಂಡಳಿಯ ಇದೇ ಮಾರ್ಚ್ 15ರಂದು ನಡೆದ ಮಹಾ ಸಭೆಯಲ್ಲಿ ಶ್ರೀಮತಿ ಮೋಹಿನಿ ರೈ ಅವರನ್ನು ಮುಂದಿನ ಅವಧಿಗೆ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಉಳಿದಂತೆ ಕಾರ್ಯದರ್ಶಿಯಾಗಿ ಶ್ರೀಮತಿ ಸವಿತಾ ಭಂಡಾರ್‌ಕರ್, ಜತೆ ಕಾರ್ಯದರ್ಶಿಯಾಗಿ ಶ್ರೀಮತಿ ಮಾಲಿನಿ ಪ್ರಹ್ಲಾದ್, ಖಜಾಂಚಿಯಾಗಿ ಶ್ರೀಮತಿ ಲಾವಣ್ಯ ಬಸವರಾಜ್ ಹಾಗೂ ಸಲಹಾ ಸಮಿತಿಯ ಸದಸ್ಯರನ್ನಾಗಿ ಶ್ರೀಮತಿ ಸವಿತಾ ಇನಾಮ್‌ದಾರ್, ಶ್ರೀಮತಿ ಪ್ರೇರಣಾ ವೆಂಕಟೇಶ್ ಮತ್ತು ಶ್ರೀಮತಿ ಕಲ್ಪನಾ ದೇಶಪಾಂಡೆ ಅವರನ್ನು ಆಯ್ಕೆ ಮಾಡಲಾಯಿತು. ಜನಕಪುರಿ ಮಹಿಳಾ ಮಂಡಳಿ ದೆಹಲಿ ಕನ್ನಡಿಗರ ವಲಯದಲ್ಲಿ ಅತ್ಯುತ್ತಮ ಸಮಾಜ ಸೇವಾ ಕಾರ್ಯಗಳನ್ನು ಮಾಡುತ್ತಾ ಜನ ಮೆಚ್ಚುಗೆಯನ್ನು ಪಡೆದಿರುತ್ತದೆ. ಮುಂದಿನ ಕಾರ್ಯಾವಧಿಯಲ್ಲಿ ಇನ್ನೂ ಹೆಚ್ಚಿನ ಸಾಮಾಜಿಕ ಕೆಲಸಗಳನ್ನು ಮಾಡುವುದಾಗಿ ಹೊಸ ಕಾರ್ಯಕಾರಿ ಸಭೆಯಲ್ಲಿ ನಿರ್ಣಯಿಸಲಾಯಿತು. ಅ

***ಸವಿತಾ ಭಂಡಾರ್ಕರ್***

# ದೆಹಲಿ ಕರ್ನಾಟಕ ಸಂಘದಲ್ಲಿ ಯುಗಾದಿ ಸಾಂಸ್ಕೃತಿಕ ಮಿಲನ




ಇಡೀ ಭಾರತದಲ್ಲಿ ಕರ್ನಾಟಕದ ಸಂಸ್ಕೃತಿ ಮತ್ತು ಜನರ ಬಗ್ಗೆ ಗೌರವವಿದ್ದು ಧನಾತ್ಮಕ ಭಾವನೆಯಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ನಿರ್ದೇಶಕರಾದ ಡಾ. ಕೆ.ಎಂ. ಮಹೇಶ್ ಹೇಳಿದ್ದಾರೆ. ಅವರು ಗುರುಗ್ರಾಮ ಕನ್ನಡ ಸಂಘ ಮತ್ತು ದೆಹಲಿ ಕರ್ನಾಟಕ ಸಂಘ ಇದೇ ಮಾರ್ಚ್ 25ರಂದು ಸಂಘದ ಸಭಾಂಗಣದಲ್ಲಿ ಆಯೋಜಿಸಿದ ಯುಗಾದಿ ಸಾಂಸ್ಕೃತಿಕ ಮಿಲನ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಹೊರನಾಡಿನಲ್ಲಿರುವ ನಮಗೆ ನಮ್ಮ ಮಕ್ಕಳಿಗೆ ನಮ್ಮೂರಿನ ಸಂಸ್ಕೃತಿಯ ಬಗ್ಗೆ ಅರಿವು ನೀಡುವುದೇ ದೊಡ್ಡ ಸವಾಲಾಗಿದೆ. ಗುರುಗ್ರಾಮದ ಕನ್ನಡಿಗರ ಚೈತನ್ಯ ಕಂಡು ಬೆರಗಾದೆ. ನಾವು ಮನೆಯಲ್ಲಿ ಕನ್ನಡ ಮಾತನಾಡದಿದ್ದರೆ ನಮ್ಮ ಮಕ್ಕಳು ಕನ್ನಡ ಕಲಿಯಲು ಸಾಧ್ಯವಿಲ್ಲ. ಆದ್ದರಿಂದ ಹೊರನಾಡಿನಲ್ಲಿರುವ ಕನ್ನಡಿಗರು ತಮ್ಮ ಮಕ್ಕಳಲ್ಲಿ ಕನ್ನಡದಲ್ಲೇ ಮಾತನಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ಭಾರತ ಸರಕಾರದ ಡೈರೆಕ್ಟರ್ ಜನರಲ್ ಹೆಲ್ತ್ ಡಾ. ಬಿ.ಡಿ ಅಥಣಿ, ಗುರುಗ್ರಾಮ ಕನ್ನಡ ಸಂಘದ ಕೆಲಸವನ್ನು ಶ್ಲಾಘಿಸಿದರು. ಪೋಷಕರು ತಮ್ಮ ಮಕ್ಕಳ ಪ್ರತಿಭೆಯನ್ನು ಪ್ರೋತ್ಸಾಹಿಸಬೇಕು ಎಂದು ಕಿವಿಮಾತು ಹೇಳಿದರು.

ವೇದಿಕೆಯಲ್ಲಿ ಗುರುಗ್ರಾಮ ಕನ್ನಡ ಸಂಘದ ಅಧ್ಯಕ್ಷ ಗಣೇಶ್ ಉಪಾಧ್ಯಾಯ, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಗುರುಗ್ರಾಮ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಕುಮಾರ್ ಸಿ. ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಗುರುಗ್ರಾಮ ಕನ್ನಡ ಸಂಘವನ್ನು ಬೆಳೆಸಲು ಶ್ರಮಿಸಿದ ಸಾಧಕರಿಗೆ ಸನ್ಮಾನ ಮಾಡಲಾಯಿತು. ಗುರುಗ್ರಾಮದ ಕನ್ನಡ ಸಂಘದ ಸದಸ್ಯರಿಂದ ಮತ್ತು ಚಾಮರಾಜ ಫಿಲ್ಮ್ ಇನ್ಸ್ಟಿಟ್ಯೂಟ್ ಬೆಂಗಳೂರು ತಂಡದಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು ಅ

*ಅಭಿಮತ ವರದಿ*























# ಮ್ಯಾಕ್ಸ್‌ವೆಲ್ ಪೆರೇರಾ : ದಿ ತಂದೂರ್ ಮರ್ಡರ್

ದೆಹಲಿಯ ನಿವೃತ್ತ ಪೋಲಿಸ್ ಕಮಿಶನರ್ ಆದ ಮ್ಯಾಕ್ಸ್‌ವೆಲ್ ಪೆರೇರಾ ಅವರು ಬರೆದಿರುವ 'ದಿ ತಂದೂರ್ ಮರ್ಡರ್–ದಿ ಕ್ರೈಂ ದಟ್ ಶೂಕ್ ದಿ ನೇಶನ್ ಅಂಡ್ ಬ್ರಾಟ್ ಅ ಗವರ್ನಮೆಂಟ್ ಟು ಇಟ್ಸ್ ಕ್ನೀ' ದೇಶದ ಆತ್ಮಸಾಕ್ಷಿಯ ಬೆಚ್ಚಿಬೀಳಿಸಿ, ಅಧಿಕಾರ ರೂಢ ಸರ್ಕಾರವನ್ನು ಮಂಡಿಯೂರುವಂತೆ ಮಾಡಿದ ಅಪರಾಧ ಪ್ರಕರಣವೊಂದರ ಬೆನ್ನತ್ತಿ ಇಡೀ ನ್ಯಾಯಾಂಗ ವ್ಯವಸ್ಥೆಗೆ ಸವಾಲಾಗಿದ್ದ ಈ ಪ್ರಕರಣವನ್ನು ಭೇಧಿಸಿ ಅದರ ಪ್ರತ್ಯಕ್ಷ ಮತ್ತು ಪರೋಕ್ಷ ಮುಖಗಳನ್ನು ಎಳೆಎಳೆಯಾಗಿ ಓದುಗರ ಕಣ್ಣಿಗೆ ಕಟ್ಟಿಕೊಡುತ್ತದೆ. ಇದೇ ಮಾರ್ಚ್ 6ರಂದು ದೆಹಲಿಯ ಪ್ರತಿಷ್ಠಿತ ಇಂಡಿಯಾ ಇಂಟರ್ ನ್ಯಾಶನಲ್ ಸೆಂಟರ್‌ನಲ್ಲಿ ದೆಹಲಿಯ ಮಾಜಿ ಪೋಲೀಸ್ ಕಮೀಷನರ್ ಆದ ನಿಖಿಲ್ ಕುಮಾರ್ ಅವರಿಂದ ಲೋಕಾರ್ಪಣೆಗೊಂಡಿತು. ಅನಂತರ ದೇಶದ ಖ್ಯಾತ ಪತ್ರಕರ್ತರೂ, ಇಂಡಿಯಾ ಟುಡೇ ಪತ್ರಿಕೆಯ ಸಲಹಾ ಸಂಪಾದಕರೂ ಆಗಿರುವ ರಾಜ್ ದೀಪ್ ಸರ್ದೇಸಾಯಿ ಅವರು ಪುಸ್ತಕದ ಕುರಿತು ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು. ಎನ್.ಡಿ.ಟಿ.ವಿ. ಯ ಪತ್ರಕರ್ತೆ ಸುನೇತ್ರ ಚೌಧರಿ ಅವರು ಮ್ಯಾಕ್ಸ್‌ವೆಲ್ ಪೆರೇರಾ ಅವರೊಡನೆ ಪುಸ್ತಕದ ಕುರಿತು ಸಂದರ್ಶನ ನಡೆಸಿದರು. ಅನಂತರ ಸಭಿಕರು ಕೂಡ ಹಲವು ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ದೇಶದ ಅತ್ಯಂತ ಸಂವೇದನಾತ್ಮಕ ಪ್ರಕರಣವೊಂದರ ವೈವಿಧ್ಯಮಯ ಮಜಲುಗಳನ್ನು, ಅದರ ಹಿಂದಿನ ರೋಚಕ ಸಂಗತಿಗಳನ್ನೊಳಗೊಂಡ ಒಂದು ನೈಜ ಘಟನೆಯೊಂದರ ಕರಾಳ ಮುಖಗಳನ್ನು ತೆರೆದಿಟ್ಟರು.

1995ರಲ್ಲಿ ದೆಹಲಿಯ ಹೃದಯಭಾಗದಲ್ಲಿರುವ ಒಂದು ರೆಸ್ಟೋರೆಂಟ್‌ನಲ್ಲಿ ನಡೆದ ತಂದೂರ್ ಹತ್ಯೆ ಮತ್ತು ಈ ಪ್ರಕರಣದಲ್ಲಿ ನೈನಾ ಸಾಹ್ನಿ ಅವರ ಕೊಲೆ ಮತ್ತು ತಂದೂರ್‌ನಲ್ಲಿ ಸುಟ್ಟುಹೋದ ಅವಳ ದೇಹವನ್ನು ಪತ್ತೆ ಹಚ್ಚಿ, ಕೊಲೆ ಪ್ರಕರಣವನ್ನು ತನಿಖೆ ಮಾಡಿದ ತಂಡದ ನೇತೃತ್ವ ವಹಿಸಿದ್ದವರು ದೆಹಲಿಯ ಅಂದಿನ ಪೋಲೀಸ್ ಕಮಿಷನರ್ ಮ್ಯಾಕ್ಸ್‌ವೆಲ್ ಪೆರೇರಾ ಕಾಮತ್. ಮೂಲತಃ ಕರ್ನಾಟಕದವರೇ ಆದ ಮ್ಯಾಕ್ಸ್‌ವೆಲ್ ಪೆರೇರಾ ಅವರು ಆ ಪ್ರಕರಣದಲ್ಲಿ ಇಡಿಯಾಗಿ ತಮ್ಮನ್ನು ತೊಡಗಿಸಿಕೊಂಡು ಪ್ರಕರಣದ ಸತ್ಯಾಂಶವನ್ನು ಬಯಲಿಗೆಳೆದು ಕೊಲೆಯಾದ ನೈನಾ ಸಾಹ್ನಿಯ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡುವುದು, ಅಪರಾಧಿಗೆ ಜೀವಾವಧಿ ಶಿಕ್ಷೆಗೆ ಗುರಿಪಡಿಸುವಲ್ಲಿ ಸಮಗ್ರ ತನಿಖೆಯನ್ನು ಕರಾರುವಕ್ಕಾಗಿ ನಡೆಸಿದುದು ಎಲ್ಲ ಅನುಭವಗಳನ್ನು ಕಾನೂನಿನ ವ್ಯಾಪ್ತಿಯಲ್ಲಿ ಬರುವ ಹಲವು ಬಗೆಯ ವಿಚಾರಗಳನ್ನು ಒಳಗೊಂಡ ಪುಸ್ತಕವನ್ನು ಹೊರತಂದಿದ್ದಾರೆ. ಅವರ ಈ ಪುಸ್ತಕ–ತಂದೂರ್ ಮರ್ಡರ್‌ನಲ್ಲಿ, ಪೆರೇರಾ ಪೊಲೀಸರು, ಕಾನೂನು ಮತ್ತು ರಾಜಕೀಯ ವ್ಯವಸ್ಥೆಗಳ ಒಳನೋಟಗಳನ್ನು ಒದಗಿಸುವ ಪ್ರಯತ್ನ ಮಾಡಿದ್ದಾರೆ.

ತಂದೂರ್‌ಲ್ಲಿ ಸುಟ್ಟುಹೋದ ನೈನಾ ಸಾಹ್ನಿ ದೇಹವನ್ನು ಪತ್ತೆ ಹಚ್ಚಿ ಅಪರಾಧಿಗೆ ಶಿಕ್ಷೆ ಕೊಡಿಸುವಲ್ಲಿ ಒದಗಬಹುದಾದ ಅನೇಕ ರೀತಿಯ ಸವಾಲುಗಳು ಮತ್ತು ಅವುಗಳನ್ನು ಎದುರಿಸುವಲ್ಲಿ ನಮ್ಮ ದೇಶದ ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ಇರುವ ಸಾಧಕ ಬಾಧಕಗಳನ್ನು ಕೂಡ ತಮ್ಮ ಪುಸ್ತಕದಲ್ಲಿ ವರ್ಣಿಸಿದ್ದಾರೆ. ಅತ್ಯಂತ ಸಂವೇದನಾತ್ಮಕ ಅಪರಾಧ ಪ್ರಕರಣವಾಗಿರುವ ಇದರಲ್ಲಿ 'ಆ ರಾತ್ರಿ ನಿಖರವಾಗಿ ಏನಾಯಿತು' ಎಂಬ ಘಟನೆಗಳನ್ನು ಚಿತ್ರಿಸಿದ್ದಾರೆ.

ಪುಸ್ತಕ ಬಿಡುಗಡೆಯ ಸಮಾರಂಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಖಜಾಂಚಿ ಶ್ರೀ ಕೆ.ಎಸ್.ಜಿ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್, ಅಭಿಮತ ಬಳಗದ ಚಂದ್ರಶೇಖರ್ ಮತ್ತು ಶ್ರೀ ಶಿವಪ್ಪ ಅವರು ಭಾಗವಹಿಸಿದ್ದರು. ಅ

*ಚಂದ್ರಶೇಖರ್ ಎನ್.ಪಿ.*

## ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನಿಂದ ರಾಮನವಮಿ ಆಚರಣೆ



ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ ಇದೇ ಮಾರ್ಚ್ 28ರಂದು ಶ್ರೀ ರಾಮನವಮಿ ಪೂಜೆಯನ್ನು ಆಯೋಜಿಸಲಾಗಿತ್ತು. ಸದಸ್ಯೆಯರೆಲ್ಲರೂ ಭಜನೆಗಳನ್ನು ಹಾಡಿ ಆರತಿ ಬೆಳಗಿಸಿ ಪೂಜೆ ಮಾಡಿದರು ತಮ್ಮ ಮನೆಗಳಿಂದ ಸ್ವಯಂ ತಯಾರಿಸಿ ತಂದಿದ್ದ ಭೋಜನ ಪ್ರಸಾದವನ್ನು ಪರಸ್ಪರ ವಿನಿಯೋಗಿಸಿ ಪೂಜಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

*ದೀನಾಜಾಯ್ಸ್*

# ನಾನು ಸಹ ಬರಹಗಾರನೇ-ಸೈ

ನಾನೂ ಸಹ ಬರಹಗಾರನೇ–ಹೌದಲ್ಲ, ಬರೆಯುವವರೆಲ್ಲ ಬರಹಗಾರರು, ವರ್ತನೆ ಮಾಡುವವರು ವರ್ತಕರು, ಭಾಷಣ ಮಾಡುವವರು ಭಾಷಣಕಾರರು, ಅಂತೆಯೇ ಬರೆಯುವವರೆಲ್ಲ ಬರಹಗಾರರು. ಹಾಗೇ ನಾನೂ ಸಹ ಬರಹಗಾರನೆಂದು ಪ್ರಮಾಣ ಮಾಡಿದ್ದಾಯಿತು.

ಸ್ವಲ್ಪ ಸಂಶಯ ಮೂಡಿ ಬರುತ್ತಿದೆ. ಮಹಾಭಾರತವನ್ನು ಬರೆದವರ್ಯಾರು? ಕುಮಾರವ್ಯಾಸ ಅಲ್ಲ ಮಹಾರಾಯರೇ! ಕನ್ನಡ ಮಹಾಭಾರತವನ್ನು ಬರೆದವರು ನಮ್ಮ ನಾಡಿನ ಕುಮಾರವ್ಯಾಸನೆಂಬ ನಾರಣಪ್ಪ. ಮೂಲ ಸಂಸ್ಕೃತ ಭಾರತವನ್ನು ಬರೆದವರು? ವ್ಯಾಸ ಮಹರ್ಷಿ. ವ್ಯಾಸರು ತಡೆಯಿಲ್ಲದೆ ಹೇಳುತ್ತಿರಲು; ಮನಗಾಣಿಸಿಕೊಂಡು ತನ್ನ ದಂತದಿಂದಲೇ ಬರೆದವನು ಗಣಪ. ಸರಿ! ಅದನ್ನೇಕೆ ವ್ಯಾಸ ಭಾರತ ಎನ್ನುತ್ತೇವೆ? ಬರೆದವನು ಬರಹಗಾರ ಗಣಪತಿಯಲ್ಲವೇ? ವ್ಯಾಸರು ಡಿಕ್ಟೇಟ್ ಮಾಡಲು, ಅರ್ಥಮಾಡಿಕೊಂಡು ಬರೆದವನು ಸ್ಟೆನೋಗ್ರಾಫರ್ ಗಣಪತಿ. ಅಂದರೆ ನಲವತ್ತರ ದಶಕದಲ್ಲಿ ದೆಹಲಿಗೆ ವಲಸೆ ಬಂದ ದಕ್ಷಿಣ ಭಾರತೀಯರಲ್ಲಿ ಅನೇಕರು ಈ ವೃತ್ತಿಯನ್ನು ಅವಲಂಭಿಸಿ ಬಂದವರು. ಅವರುಗಳೆಲ್ಲರೂ ತಮ್ಮನ್ನು ಗಣಪತಿಯ ವಂಶಜರೆಂದು ಹೆಮ್ಮೆ ಪಡಬಹುದಲ್ಲವೇ? ಆಗಿನ ಕಾಲದಲ್ಲಿ ಜಿ.ಟಿ. ಎಕ್ಸ್‌ಪ್ರೆಸ್ ರೈಲುಗಾಡಿಯನ್ನು ಸ್ಟೆನೋ ಎಕ್ಸ್‌ಪ್ರೆಸ್ ಎಂದು ಲೇವಡಿ ಮಾಡುತ್ತಿದ್ದರಂತೆ. ಈಗಿನ ಕಾಲದಲ್ಲಿ ಈ ವೃತ್ತಿಯನ್ನು ಮಾಡುವವರು ಇಲ್ಲವೆನ್ನಬಹುದಾಗಿದೆ. ಪಿ.ಎ; ಸ್ಟೆನೊ, ಸ್ಥಾನವನ್ನು ಗಣಕಯಂತ್ರಗಳು ಆಕ್ರಮಿಸಿಕೊಂಡಿವೆ. ಗಣಕಯಂತ್ರದ ಮುಂದೆ ಕುಳಿತು ಡಿಕ್ಟೇಟ್ ಮಾಡಲು, ಟೈಪ್ ಮಾಡಿ ಪ್ರಿಂಟ್ ನಮ್ಮ ಇಡುತ್ತವೆಯಂತೆ. ಈಗ ಪ್ರಮುಖರಲ್ಲಿ ಹಲವರು ಇಂತಹ ಗಣನಿಗಳನ್ನೇ ತಮ್ಮ ದೈನಿಕ ಚರ್ಯೆಗಳಲ್ಲಿ ಬಳಸುತ್ತಿದ್ದಾರೆಯಂತೆ.

ಸರಿ, ಬರಹಗಾರನೆಂಬ ಹೊಸ ಶಬ್ದ ಏಕೆ? "ಲೇಖಕ" ಅಂದರಾಗದೆ? ಲೇಖಣಿಯಲ್ಲಿ ಬರೆಯುವವನು ಲೇಖಕ. ಈಗಿನ ಕಾಲದಲ್ಲಿ ವಿದ್ಯಾರ್ಥಿಗಳನ್ನು ಬಿಟ್ಟರೆ, ಬೇರೆ ಯಾರು ಲೇಖಣಿಯನ್ನು ಬಳಸುತ್ತಾರೆ? ಹೇಳಿ! ಎಲ್ಲರೂ ಗಣನಿಯಲ್ಲಿ ಟೈಪ್ ಮಾಡುವವರೆ. ನನ್ನಂತಹ ಒಂದಿಬ್ಬರು ಬರೆಯುತಾರೆ. ಬರೆಯುವ ಹಠ ಹಿಡಿದಿದ್ದಾರೆ. ಅದಕ್ಕೆ ಈ ಶಬ್ದ 'ಬರಹಗಾರ'.

'ಹಲಗೆ ಬಳಪವ ಹಿಡಿಯದೊಂದು ಹೆಗ್ಗಳಿಕೆ' ಎನ್ನುತ್ತಾನೆ ಕುಮಾರವ್ಯಾಸ. ನಾನು ಹಾಗೆ ಹೇಳಲಾಗದು ನಾನು ಬರೆಯಲು ಕಲಿತದ್ದು, ಬಳಪ ಹಿಡಿದು ಕಪ್ಪು ಹಲಗೆಯಲ್ಲಿ ಬರೆದೇ! ಈಗಿನ ಕಾಲದಲ್ಲಿ ಈ ಹಲಗೆ ಬಳಪ ಮಾಯವಾಗಿವೆ. ಪಟ್ಟಣದ ಶಾಲೆಗಳಲ್ಲಿ ಇವು ಇಲ್ಲವೇ ಇಲ್ಲ. ಹಳ್ಳಿಗಳಲ್ಲಿ ಬಹುಶಃ ಇರಬಹುದು. ಆದ್ದರಿಂದ ಇಂದಿನ ಬರಹಗಾರರೆಲ್ಲ ಹಲಗೆ ಬಳಪ ಹಿಡಿಯದವರೇ!

ಪರರ ಬಗೆ ಪರರುಕ್ತಿ ಪರರು
ತ್ಕರುಷ ಪರರುನ್ನತಿಯ ಕೃತಿಯ
ಪಹರಣೆ ಪರರು ಪಯಾನ
ಪರರೊಡ್ಡವಿದಪರು ಜನದ
ಹರಹು ಹೊಗದಗ್ಗಳಿಕೆ ಪದ ಸಂಚರಣೆಯಲಿ
ಲಿಪಿ ತಿರುಗಿ ನೋಡದ ಬಿರಿದು
ಬೇರೆ ಕುಮಾರ ವಾಲ್ಮೀಕಿಯ ವಚ್ಚೋಲಹರಿ

ಎನ್ನುತ್ತಾನೆ ಕುಮಾರ ವಾಲ್ಮೀಕಿ ಎಂಬ ನರಹರಿ.

ಪರರು ಪಮಾನ, ಪರರುಕ್ತಿಯನ್ನು ಸುಲಭವಾಗಿ ಬಳಸಲು ಸಮರ್ಥರು ಇಂದಿನ ಬರಹಗಾರರು. ಕಂಪ್ಯೂಟರ್‌ನಲ್ಲಿ ಕಟ್ ಅಂಡ್ ಪೇಸ್ಟ್ ಎಂಬ ಚಾತುರ್ಯವನ್ನು ಬಳಸಿ ಇಲ್ಲಿಂದ ಸ್ವಲ್ಪ, ಅಲ್ಲಿಂದ ಸ್ವಲ್ಪ ಎಂದು ಕಿತ್ತು ಬೆಸದು ತಮ್ಮದೆಂದು, ಹೇಸದೆ, ಹೆಮ್ಮೆಯಿಂದ ಸಾರುವ ಕೆಚ್ಚುಳ್ಳವರು ಇಂದಿನ ಬರಹಗಾರರಲ್ಲಿ ಅನೇಕರು. ಹೀಗೆ ಪರರ ಕೃತಿಯನ್ನು ಅಪಹರಿಸಿ, ಪದ ಸಂಚರಣೆಯನ್ನು ತಪ್ಪದೆ ಬಳಸಿ ತಮ್ಮದೇ ಕೃತಿ ಎಂದು, ತಾವು ವಹಿಸುತ್ತಿರುವ ಪದವಿಯ ಪರದೆಯ ಹಿಂದೆ ನಿಮತು ಘೋಷಿಸುವವರೂ ಸಹ ಇದ್ದಾರೆ. ನನಗೆ ಕನ್ನಡ ಕಲಿಸಿದ ಕನ್ನಡ ಪಂಡಿತರು ಒಂದು ವಚನವನ್ನು ಗಡಿಗಡಿಗೆ ಹೇಳುತ್ತಿದ್ದರು.

ಕರೆಯದೆಲೆ ಹೋಗುವವನ
ಬರೆಯದೆಲೆ ಓದುವವನ
ಬರಿಕಾಲಲಿ ನಡೆವನ ಕರೆತಂದು
ಕೆರದಲ್ಲಿ ಹೊಡೆದಂತೆ ಸರ್ವಜ್ಞ

ಬರವಣಿಗೆ ಮಾಡದೆ ಓದಿ ಬಾಯಿ ಪಾಠ ಮಾಡಬಾರದು ಎಂಬುದನ್ನು ನಮಗೆ ಮನದಟ್ಟಾಗುವಂತೆ ಮಾಡಲು ಬಳಸುತ್ತಿದ್ದ ವಚನವಿದು. ಇತ್ತೀಚೆಗೆ ಡಾ. ಬಸವರಾಜುರವರು ಇದು ಸರ್ವಜ್ಞನ ಮೂಲ ವಚನವಲ್ಲ. ಆ ಮೇಲಿನ ಸೇರಿಕೆ ಎಂದು ಬರೆದಿದ್ದಾರೆ.

ಗಣಕಯಂತ್ರದ ವಸತಿ ಇದ್ದರೂ ನಾನು ಮಾತ್ರ ಬರೆಯುವುದನ್ನು ಬಿಟ್ಟಿಲ್ಲ. ಅಭಿಮತದ ಸಂಪಾದಕರೂ ಸಹ ಏನಾದರೂ ಬರೆದುಕೊಡಿ ಎಂದು ಕೇಳುತ್ತಾರೆ. ದೆಹಲಿ ಕರ್ನಾಟಕ ಸಂಘದಲ್ಲಿ ಭಾಷಣ ಮಾಡಲು ಕರೆದಿರುವ ಅಧ್ಯಕ್ಷ ಮಹೋದಯರು ಸಹ ನನ್ನನ್ನು ಬರಹಗಾರನೆಂದೇ ಸಂಬೋಧಿಸಿದ್ದಾರೆ. ಆಗಲಿ ಎಂದು ನಾನೂ ಬರೆಯುತ್ತಿದ್ದೇನೆ. ಆದ್ದರಿಂದ ನಾನೂ ಬರಹಗಾರನೇ ಸೈ. ಅ

*ಸು. ಶ್ರೀನಿವಾಸ*



## ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನಿಂದ ಮಹಿಳಾ ದಿನಾಚರಣೆ

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನಿಂದ ಮಹಿಳಾ ದಿನಾಚರಣೆ

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ ಇದೇ ಮಾರ್ಚ್ 13ರಂದು ಅಂತರಾಷ್ಟ್ರೀಯ ಮಹಿಳಾ ದಿನವನ್ನು ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ಆಯೋಜಿಸಿತು. ಮುಖ್ಯ ಅತಿಥಿಯಾಗಿ ನಿವೃತ್ತ ಮಹಿಳಾ ಸೇನಾ ಲೆಫ್ಟಿನೆಂಟ್, ಪ್ರೇರಣ ಭಾಷಣಗಾರ್ತಿ, ಲೇಖಕಿ, ನಟಿ ಹಾಗೂ 2017 ಮಿಸ್ ವರ್ಲ್ಡ್ ಸೌಂದರ್ಯ ಸ್ಪರ್ಧೆಯ ತರಬೇತಿದಾರರಾದ ಶ್ರೀಮತಿ ರೀಟಾ ಗಂಗ್ವಾನಿಯವರು ಆಗಮಿಸಿದ್ದರು. ಇವರು ಮಹಿಳೆಯರನ್ನುದ್ದೇಶಿಸಿ ಜೀವನ ಮೌಲ್ಯಗಳ ಬಗ್ಗೆ ಮಾತನಾಡುತ್ತಾ ತಮ್ಮನ್ನು ಯಾವಾಗಲೂ ಬೇರೊಬ್ಬರೊಡನೆ ಹೋಲಿಕೆ ಮಾಡಿಕೊಳ್ಳದೆ ತಮ್ಮ ಪ್ರತಿಭೆಗಳನ್ನು ಇರುವಂತೆಯೇ ಒಪ್ಪಿ ಸ್ವೀಕರಿಸಬೇಕು. ಅಲ್ಲದೆ ಅನ್ಯರ ಮೇಲೆ ಆಶ್ರಿತರಾಗದೆ ತಮ್ಮ ಕೆಲಸ ಕಾರ್ಯಗಳನ್ನು ತಾವೇ ನಿಭಾಯಿಸಬೇಕು, ಯಾರಿಂದಲೂ ಏನನ್ನೂ ನಿರೀಕ್ಷಿಸಬಾರದು, ಭೂತಕಾಲದ ಘಟನೆಗಳನ್ನು ಮರೆತು ಅದರಿಂದ ದೊರೆತ ಹೊಸ ಪಾಠಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು, ನಕಾರಾತ್ಮಕ ಪರಿಣಾಮ ಬೀರುವ ಆಹಾರಗಳನ್ನು ವರ್ಜಿಸಿ ಸಕಾರಾತ್ಮಕ ಪರಿಣಾಮ ಬೀರುವ ಆಹಾರವನ್ನು ಸೇವಿಸಬೇಕೆಂದು ತಿಳಿಸಿದರು. ಜನಕಪುರಿ ಮಹಿಳಾ ಸದಸ್ಯೆಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮದ ನಂತರ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಅ

*ದೀನಾಜಾಯ್ಸ್*



## ಪದ್ಮಶ್ರೀ ಪ್ರಶಸ್ತಿ ಪಡೆದ ಸೂಲಗಿತ್ತಿ ನರಸಮ್ಮ ಅವರಿಗೆ ದೆಹಲಿ ಕರ್ನಾಟಕ ಸಂಘದ ಅಭಿನಂದನೆ

ಈ ಬಾರಿಯ 'ಪದ್ಮಶ್ರೀ' ಪ್ರಶಸ್ತಿ ಪುರಸ್ಕೃತ ಸೂಲಗಿತ್ತಿ ನರಸಮ್ಮ ಅವರನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಮಾರ್ಚ್ 22ರಂದು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಹಿಂದಿನ ಕಾಲದಲ್ಲಿ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಆಸ್ಪತ್ರೆಗಳಿರಲಿಲ್ಲ. ಊರಿನಲ್ಲಿ ಸೂಲಗಿತ್ತಿಯರು ಹೆರಿಗೆ ಮಾಡಿಸಿ ಎಲ್ಲರನ್ನೂ ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೆ ಅವರಿಗೆಲ್ಲ ಇಂದಿನ ದಿನಗಳಲ್ಲಿ ನಾವು ನೋಡುವಂತೆ ಹಣದ ಆಸೆಗಾಗಿ ಆ ಕಾಯಕವನ್ನು ಮಾಡದೇ ಸಮಾಜ ಸೇವೆ ಮಾಡುತ್ತಿದ್ದರು ಎಂದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಸ್ವಾಗತಿಸಿ ವಂದಿಸಿದರು. ಕರ್ನಾಟಕ ಬ್ಯಾಂಕಿನ ವ್ಯವಸ್ಥಾಪಕರಾದ ಲಕ್ಷ್ಮೀನಾರಾಯಣ ಮತ್ತು ಸಂಘದ ಜಂಟೀ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ ಅವರು ಉಪಸ್ಥಿತರಿದ್ದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ನರಸಮ್ಮ ಅವರು ದೆಹಲಿ ಕರ್ನಾಟಕ ಸಂಘ ಒಳ್ಳೆಯ ಕೆಲಸ ಮಾಡುತ್ತಿದೆ ಎಂದು ಸಂತೋಷ ವ್ಯಕ್ತಪಡಿಸಿ, ಎಲ್ಲರಿಗೂ ಶುಭ ಹಾರೈಸಿದರು. ಅ

**ಅಭಿಮತ ವರದಿ**

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770


MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
April-2018, Vol. No.28, Issue No.7, Price Rs.1/-
RNI Regn. No. 53405/91, DL-SW-1/4016/16-18
Date of Publication : April 8th / 9th, Posting Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022, Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

Easy Banking at your Fingertips

KBL Mobile Banking




Paying shopping bills, Movie tickets, restaurant bills
Utility bills like electricity bill, mobile bills etc.

Call toll free no. 1800 425 1444 or step into your nearest branch for details

Karnataka Bank
Your Family Bank. Across India.

Regd. & Head Office: Mangaluru - 575 002 CIN - L85110KA1924PLC001128 E-mail: info@ktkbank.com Visit us at: www.karnatakabank.com